

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 | Issue : 308 | Friday 22-08-2025 | E-mail : maruti.b.hosamani76@gmail.com | Page: 4 | Price : Rs. 1/-


## ವೈಭವದ ಕುಂಟೋಜಿ ಬಸವೇಶ್ವರ ದೇವಸ್ಥಾನದ–ಪ್ರಥಮ ಮಹಾ ರಥೋತ್ಸವ




**ಸಿಹಿ ಕಹಿ ಸುದ್ದಿ,**

**ಮುದ್ದೇಬಿಹಾಳ** : ಮುದ್ದೇಬಿಹಾಳ ತಾಲೂಕಿನ ಕುಂಟೋಜಿ ಗ್ರಾಮದಲ್ಲಿ ಕೊಪ್ಪಳದ ಗವಿಸಿದ್ದೇಶ್ವರ ಸ್ವಾಮೀಜಿ ಲೋಕಾರ್ಪಣೆ ಗೊಳಿಸಿದ. ಕುಂಟೋಜಿ ಶ್ರೀ ಬಸವೇಶ್ವರ ಶ್ರೀ ಸಂಗಮೇಶ್ವರ ದೇವಸ್ಥಾನದ ರಥೋತ್ಸವ ಸಾವಿರಾರು ಭಕ್ತಾದಿಗಳ ಜಯ ಘೋಷಣೆಗಳ ಮಧ್ಯೆ ಮಂಗಳವಾರ ಸಂಜೆ 06:35 ಕ್ಕೆ ಜರುಗಿತು. ತಾಲೂಕಿನ ಆಲೂರು ಗ್ರಾಮದ ಭಕ್ತ–ರಿಂದ ತೇರಿನ ಕಳಸ. ಗರಸಂಗಿ ಯಿಂದ ತೇರಿನ ಹಗ್ಗ. ಮುದ್ದೇಬಿಹಾಳ ಹಾಗೂ ಅಬ್ಬಿಹಾಳ ಭಕ್ತರಿಂದ ರುದ್ರಾಕ್ಷಿ ಹಾರಗಳು. ಆಗಮಿಸಿದ ನಂತರ ಪಲ್ಲಕ್ಕಿಯೊಂದಿಗೆ ರಥದ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ನಿಡ ಸೋಶಿ ಶಿವಲಿಂಗೇಶ್ವರಸಿದ್ದಸಂಸ್ಥಾನಮಠದಪ್ರಭುಸ್ವಾಮೀಜಿ. ಕುಂಟೋಜಿ ಚೆನ್ನವೀರ ಶಿವಾಚಾರ್ಯರು. ಮಾಜಿ ಶಾಸಕ ಎ.ಎಸ್ ಪಾಟೀಲ್ ನಡಹಳ್ಳಿ. ಜಾತ್ರಾ ಕಮೀಟಿ ಅಧ್ಯಕ್ಷ ಗುರುಲಿಂಗಪ್ಪ ಸುತ್ತಳ್ಳಿ. ಹಾಗೂ ಇತರರು ನೂತನ ಪ್ರಥಮ ರಥೋತ್ಸವಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಪ್ರಥಮ ಬಾರಿಗೆ ರಥೋತ್ಸವದಲ್ಲಿ ಪಾಲ್ಗೊಂಡಿದ್ದತರುಣರುತಮ್ಮೂರಿನತೇರುಪಾದಗಟ್ಟಿ ಮುಟ್ಟುತ್ತಲೇ ಜಯ ಘೋಷಣೆ ಹೊಂದಿಗೆ. ಕುಣಿದು ಸಂಭ್ರಮಿಸಿದರು. ಭಕ್ತರೂ ರಥಕ್ಕೆ ಉತ್ತತ್ತಿ ಬಾಳೆಹಣ್ಣು ಮತ್ತು ಇತರ ಮಂಗಳಕಾರಿ ವಸ್ತುಗಳು ಅರ್ಪಿಸಿ ನಮಿಸಿದರು. ಸಿಪಿಐ ಮಮ್ಮದ್ ಪಸಿಹುದ್ದೀನ್. ಪಿಎಸ್ಐ ಸಂಜಯ್ ತಿಪ್ಪಾರೆಡ್ಡಿ. ಹಾಗೂ ಸಿಬ್ಬಂದಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿ ಕೊಂಡರು. ವಿಶೇಷವೆಂದರೆ ಎರಡು ದಿನಗಳಿಂದ ಬಿಟ್ಟು ಬಿಡದೆ ಸುರಿಯುತ್ತಿದ್ದ ಮಳೆರಾಯ ರಥೋತ್ಸವದ ಸಮಯದಲ್ಲಿ ಎರಡು ಮೂರು ತಾಸು ಬಿಡುವು ಕೊಟ್ಟಿದ್ದು ವಿಶೇಷವಾಗಿತ್ತು. ರಥೋತ್ಸವದ ಸಂದರ್ಭದಲ್ಲಿ. ಪ್ರಮುಖರಾದ ಸಂಗನಬಸಯ್ಯ ಹಿರೇಮಠ್. ಸಿದ್ದಲಿಂಗಯ್ಯ ಕಲ್ಯಾಣ ಮಠ. ಶಿವಣ್ಣ ಶನಿವಾರ. ಅಂಬರೀಶ್ ಗೂಳಿ. ಶರಣು ಹಿರೇಮಠ. ಎಂ.ಎಸ್ ಕನ್ನೂರ್. ಮಲ್ಲನಗೌಡ ಬಿರಾದಾರ್. ಸಂಗಮ ಉಣ್ಣಿಬಾವಿ. ಸುರೇಶ್ ಅಳಗುಂಡಿ. ಮಲ್ಲಪ್ಪ ಬಡಿಗೇರ್. ಹನುಮಪ್ಪ ಕಾರ್ಕೂರ್. ರಾಘವೇಂದ್ರ ಬಡಿಗೇರ್. ಮಹೇಶ್ ಅಂಬಿಗೇರ್. ಗುರು ಹಿರಿಯರು ಉಪಸ್ಥಿಥರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಬಸವರಾಜ.ಸಂಕನಾಳ. ಮುದ್ದೇಬಿಹಾಳ**

## ಸರ್ಕಾರದ ಬೊಕ್ಕಸಕ್ಕೆ ತೆರಿಗೆ ವಸೂಲಾತಿ ಬರಿಸದೆ ಅಕ್ರಮ ಮರಳು ದಂಧೆ ನಡೆಸುತ್ತಿದ್ದ ಟಿಪ್ಪರ್ ಪೋಲಿಸ್ ವಶಕ್ಕೆ





**ಸಿಹಿ ಕಹಿ ಸುದ್ದಿ,**

**ಮಾನ್ವಿ**:ತಾಲೂಕಿನ ಮದ್ಲಾಪುರ್ ಗ್ರಾಮದಲ್ಲಿ ಅಕ್ರಮ ಮರಳು ಸಾಗಾಣಿಕೆ ಮಾಡುತ್ತಿದ್ದ ಅಡ್ಡೆ ಮೇಲೆ ಪೊಲೀಸರು ದಾಳಿ ಮಾಡಿ 14 ಟಿಪ್ಪರ್ ಹಾಗೂ ಒಂದು ಜೆಸಿಬಿ ವಶ ಪಡಿಸಿ ಕೊಂಡಿದ್ದಾರೆ.

ಮಾನ್ವಿ ಪಿ.ಐ ಸೋಮಶೇಖರ್ ಕೆಂಚ ರೆಡ್ಡಿ ನೇತೃತ್ವದಲ್ಲಿ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ್ದು

ಈ ವೇಳೆ 2 ಟಿಪ್ಪರ್ ಗಳಲ್ಲಿ ಮರಳು ತುಂಬಿಸಿ ಕೊಂಡಿದ್ದಾರೆ. ಇತರ ವಾಹನಗಳ ಚಾಲಕರು ಜೆಸಿಬಿ ಆಪರೇಟರ್ ವಾಹನಗಳನ್ನು ಬಿಟ್ಟು ಪರಾರಿ ಯಾಗಿದ್ದಾರೆ.

ಸರ್ಕಾರಕ್ಕೆ ಬೊಕ್ಕಸಕ್ಕೆ ಆದಾಯ ತುಂಬದೇ ಸ್ವಂತ ಲಾಭಕ್ಕಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದ ಮಾಲೀಕರು ಹಾಗೂ ಚಾಲಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದು ತಿಳಿದಿ ಬಂದಿದೆ ಪಂಚರ ಸಮಕ್ಷಮ ಟಿಪ್ಪರುಗಳು ಮತ್ತು ಜೆಸಿಬಿಯನ್ನು ಜಪ್ತಿ ಮಾಡಲಾಗಿದ್ದು. ಮಾನ್ವಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಮೊಬೈಲ್, ಟಿ.ವಿ ಬಿಟ್ಟು ಓದಿನತ್ತ ಗಮನ ಹರಿಸಿರಿ ಮಕ್ಕಳಿಗೆ ಮಾತಾಜೀ ತ್ಯಾಗಮಯೀ ಕಿವಿಮಾತು



**ಸಿಹಿ ಕಹಿ ಸುದ್ದಿ,**

**ಚಳ್ಳಕೆರೆ** : ವಿದ್ಯಾರ್ಥಿಗಳು ಮೊಬೈಲ್, ಟಿ.ವಿ ನೋಡುವುದನ್ನು ಬಿಟ್ಟು ಓದಿನತ್ತ ಗಮನ ಹರಿಸಬೇಕು ಎಂದು ಚಳ್ಳಕೆರೆಯ ಶ್ರೀಶಾರದಾಶ್ರಮದ ಅಧ್ಯಕ್ಷರಾದ ಪೂಜ್ಯ ಮಾತಾಜೀ ತ್ಯಾಗಮಯೀ ಅವರು ಮಕ್ಕಳಿಗೆ ಕಿವಿಮಾತು ಹೇಳಿದರು.

ನಗರದ ವಾಸವಿ ಕಾಲೋನಿಯ ಶ್ರೀಶಾರದಾಶ್ರಮದ ದೇವಸ್ಥಾನದಲ್ಲಿ ಎಸ್.ಆರ್.ಎಸ್ ಪ್ರೌಢ ಶಾಲೆಯ 9 ಮತ್ತು 10 ನೇ. ತರಗತಿಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ "ವ್ಯಕ್ತಿತ್ವ ನಿರ್ಮಾಣಕಾರಿ ತರಗತಿ" ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಜೀವನದ ಅಮೂಲ್ಯ ಸಮಯವನ್ನು ಮೊಬೈಲ್, ಟಿ.ವಿ ಸೇರಿದಂತೆ ಇನ್ನಿತರ ಚಟುವಟಿಕೆಗಳಲ್ಲಿ ಸಮಯ ಪೋಲು ಮಾಡದೆ ಓದಿನತ್ತ ಗಮನ ಹರಿಸಿ ಉನ್ನತ ಶಿಕ್ಷಣ ಪಡೆದು ಉತ್ತಮ ಸಾಧನೆ ಮಾಡಬೇಕು ಎಂದು ತಿಳಿಸಿದರು.

ಶಿಕ್ಷಕಿ ಮತ್ತು ಸದ್ಭಕ್ತರಾದ ವೆಂಕಟಲಕ್ಷ್ಮಮ್ಮ ಅವರು ಸ್ವಾಮಿ ಪುರುಷೋತ್ತಮಾನಂದಜೀ ಮಹಾರಾಜ್ ಅವರು ಬರೆದಿರುವ "ಶಕ್ತಿಶಾಲೀ ವ್ಯಕ್ತಿತ್ವ ನಿರ್ಮಾಣ" ಎಂಬ ಪುಸ್ತಕದಲ್ಲಿ ಬರುವ "ಬೌದ್ಧಿಕ ಶಕ್ತಿ" ಯ ಬಗ್ಗೆ ಮಾತನಾಡುತ್ತ ವಿದ್ಯಾರ್ಥಿಗಳು ಅವಧಾನ, ಅಧ್ಯಯನ, ಉತ್ತಮ ಆಲೋಚನೆ ಮತ್ತು ಪ್ರಾರ್ಥನೆ ಮಾಡುವ ಅಭ್ಯಾಸವನ್ನು ರೂಢಿಸಿ ಕೊಳ್ಳಬೇಕು ಎಂದು ಹಿತ ನುಡಿ ಹೇಳಿದರು. ಕಾರ್ಯಕ್ರಮದ ಆರಂಭದಲ್ಲಿ ಭಜನೆಯನ್ನು ಯತೀಶ್ ಎಂ ಸಿದ್ದಾಪುರ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಎಸ್,ಆರ್,ಎಸ್ ಪ್ರೌಢ ಶಾಲೆಯ ಶಿಕ್ಷಕರಾದ ಗುರುಪ್ರಸಾದ್, ಲತಾ, ಶ್ವೇತ, ಸ್ವಯಂ ಸೇವಕ ಸಂತೋಷಕುಮಾರ ಅಗಸ್ತ್ಯ, ಜಯಾದಿತ್ಯ ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ವರದಿ–ಯತೀಶ್ ಎಂ ಸಿದ್ದಾಪುರ, ಚಳ್ಳಕೆರೆ.**

## ಜಲಶುದ್ಧೀಕರಣ ಘಟಕ ವೀಕ್ಷಿಸಿದ ಜಿಲ್ಲಾಧಿಕಾರಿ



**ಮಹಾಲಿಂಗಪುರ:** ತಾಲ್ಲೂಕಾ ಹೋರಾಟದ ಬಾರಕೋಲ ಚಳುವಳಿ ನಿಮಿತ್ಯ ಮಹಾಲಿಂಗಪುರಕ್ಕೆ ಆಗಮಿಸಿದ್ದ ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ ಎಂ. ಅವರು ಪಟ್ಟಣದ ಜಿಎಲ್ಬಿಸಿ ಆವರಣದಲ್ಲಿರುವ ಕುಡಿಯುವ ನೀರಿನ ಜಲಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪಟ್ಟಣದ ಜನತೆಗೆ ಗುಣಮಟ್ಟದ ಶುದ್ಧ ಕುಡಿಯುವ ನೀರನ್ನು ಪೂರೈಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಜಲಶುದ್ಧೀಕರಣ ಘಟಕ ಮತ್ತು ಪಟ್ಟಣದಲ್ಲಿನ ನಾಲ್ಕು ಓವರ್ ಹೆಡ್ ಟ್ಯಾಂಕ್ಗಳನ್ನು ಪ್ರತಿ ತಿಂಗಳಿಗೊಮ್ಮೆ ಸ್ವಚ್ಛತೆ ಮಾಡಬೇಕು. ಪಟ್ಟಣದಲ್ಲಿನ ಎಲ್ಲಾ ಜಲಮೂಲಗಳನ್ನು ಸಂರಕ್ಷಿಸಿ ನೀರಿನ ತೊಂದರೆಯಾಗದಂತೆ ಹಾಗೂ ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲು ಪುರಸಭೆ ಅಧಿಕಾರಿಗಳಿಗೆ ತಿಳಿಸಿದರು.

ಆಸ್ತಿ ತೆರಿಗೆ, ಉದ್ದಿಮೆ ಪರವಾನಿಗೆ ತೆರಿಗೆ ಸೇರಿದಂತೆ ಎಲ್ಲಾ ತೆ–ರಿಗೆಗಳನ್ನು ಕಡ್ಡಾಯವಾಗಿ ಪ್ರತಿಶತ ನೂರರಷ್ಟು ವಸೂಲಾತಿಗೆ ಸೂಚಿಸಿದರು. ಪರವಾನಿಗೆ ಇಲ್ಲದ ವಾಣಿಜ್ಯಅಂಗಡಿಗಳನ್ನುಗುರುತಿಸಿ ದಂಡ ವಿಧಿಸಿ ಉದ್ಯಮ ಪರವಾನೆ ನೀಡುವ ಮೂಲಕ ಪುರಸಭೆಯ ಸ್ಥಳೀಯ ಆದಾಯ ಹೆಚ್ಚಿಸಿ ಪಟ್ಟಣದ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಮುಖ್ಯಾಧಿಕಾರಿ ನಾಮದೇವ ಲಮಾಣಿ ಅವರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಎಸ್.ಪಿ. ಸಿದ್ಧಾರ್ಥ ಗೋಯಲ್, ಮುಖ್ಯಾಧಿಕಾರಿ ನಾಮದೇವ ಲಮಾಣಿ, ಜಮಖಂಡಿಯ ಎ.ಸಿ. ಶ್ವೇತಾ ಬೀಡಿಕರ್, ರಬಕವಿ–ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ, ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್ ರಜಾಕ್ ಬಾಗವಾನ, ಸದಸ್ಯ ಮುಸ್ತಾಕ ಚಿಕ್ಕೋಡಿ, ಮುಖಂಡರಾದ ಡಾ. ಎ. ಆರ್. ಬೆಳಗಲಿ, ಆನಂದ ಹಟ್ಟಿ ಸೇ–ರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.

## ಭೂಮಿ ವಸತಿ "ಹಕ್ಕು ಮಾನ್ಯ ಮಾಡುವ" ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹ



**ಸಿಹಿ ಕಹಿ ಸುದ್ದಿ,**

**ತರೀಕೆರೆ** : ದಿವಂಗತ/ ದೇವರಾಜ ಅರಸು ರವರು ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿಯ ಮೂಲಕ ಉಳುವವನೇ ಭೂಮಿಯ ಒಡೆ–ಯ ಕಾಯ್ದೆಯನ್ನು ಜಾರಿಗೆ ತಂದರು. ಎಂದು ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷರಾದ ಎಂ.ಓಂಕಾರಪ್ಪ ನವರು ಇಂದು ಪಟ್ಟಣದ ತಾಲೂಕಾ ಆಡಳಿತ ಕಚೇರಿಯ ಮುಂದಿನ ಡಾ. ಬಿ.ಆರ್ ಅಂಬೇಡ್ಕರ್ ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಇಂದು ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ರವರ 110 ನೇ. ಜನ್ಮದಿನದ ಪ್ರಯುಕ್ತ ವಿವಿಧ ದಲಿತ ಸಂಘಟನೆಗಳ ಮುಖಂಡರೊಂದಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಪುಷ್ಪಾರ್ಚನೆ ಮಾಡಿ ಅವರ ಪುತ್ಥಳಿಯ ಎದುರು ಪತ್ರಿಕಾಗೋಷ್ಠಿನಡೆಸಿದರು. ಬಗರ್ ಹುಕುಂ ಸಾಗುವಳಿದಾರರು ಅರ್ಜಿ ಸಲ್ಲಿಸಿದ್ದು ರಾಜ್ಯ ಸರ್ಕಾರದ ಲೆಕ್ಕದಲ್ಲಿ 33 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಇದ್ದು ಇದರಲ್ಲಿ ಶೇ% 90 ರಷ್ಟು ಅರ್ಜಿಗಳನ್ನು ತಿರಸ್ಕರಿಸಿ ವಿಲೇವಾರಿ ಮಾಡಿದೆ. ಅರಣ್ಯ ಹಕ್ಕು ಕಾಯ್ದೆಯನ್ನು ಜಾರಿ ಮಾಡದೆ ಅರಣ್ಯ ಅಧಿಕಾರಿಗಳು ಪರಿಸರದ ಹೆಸರಿನಲ್ಲಿ ಜನರಿಗೆ ವಂಚನೆ ಮಾಡುತ್ತಿದ್ದು ಆದಿವಾಸಿ ಇನ್ನಿತರೆ ಜನ ಸಮುದಾಯಗಳಿಗೆ ಸಂವಿಧಾನ ಬದ್ಧ ಹಕ್ಕನ್ನು ನಿರಾಕರಿಸಲಾಗುತ್ತಿದೆ ಕಾನೂನು ಬದ್ಧವಾಗಿರುವ ಅರಣ್ಯ ಹಕ್ಕು ಕಾಯ್ದೆಯನ್ನು ನಿರ್ಜೀವ ಗೊಳಿಸಲಾಗುತ್ತಿದೆ ಎಂದು ಆರೋಪಿಸಿದರು. ಉಳುವವನೇ ಭೂ ಒಡೆಯ ನೀತಿಯನ್ನು ಜಾರಿ ಮಾಡದಂತೆ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಸರ್ಕಾರವಾಗಿ ಸಾಗುವಳಿ ಮಾಡುತ್ತಾ ಅರ್ಜಿ ಸಲ್ಲಿಸಿರುವರಿಗೆ ಭೂ ಮಂಜೂರಾತಿ ನೀಡಲು ಒನ್ ಟೈಮ್ ಸೆಟ್ಲ್ಮೆಂಟ್ ಜಾರಿ ಮಾಡುವ ಮೂಲಕ ಬಡವರಿಗೆ ನ್ಯಾಯ ದೊರಕಿಸ ಬೇಕೆಂದು ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಆಗ್ರಹಿಸುತ್ತಿದೆ ಎಂದು ಹೇಳಿದರು.

ಮಹಾತ್ಮ ಪ್ರೊ, ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾದ ತರೀಕೆರೆ ಎನ್ ವೆಂಕಟೇಶ್, ಜಿಲ್ಲಾ ಸಂಘಟನಾ ಸಂಚಾಲಕರಾದ ಎಚ್.ವಿ ಬಾಲರಾಜ್, ತಾಲೂಕು ಸಂಚಾಲಕರಾದ ರಾಜಪ್ಪ, ಕುಮಾರಪ್ಪ, ಮಂಜಪ್ಪ, ಸಿದ್ದರಾಮಪ್ಪ, ಶಿವರಾಜ್, ಪರಮೇಶ್ ಹಾಗೂ ಮುಂತಾದವರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್.ತರೀಕೆರೆ. ಚಿಕ್ಕಮಗಳೂರು**

## ಬಸವ ತತ್ವದ ಗಟ್ಟಿಬೀಜ ಬಿತ್ತಿದವರು ಇಲಕಲ್ಲ ಮಹಾಂತ ಶ್ರೀಗಳು



**ರಾಯಬಾಗ:**ಬಸವತತ್ವಗಳನ್ನುಆಚ–ರಣೆಯಲ್ಲಿ ಅನುಷ್ಠಾನಗೊಳಿಕೂಂಡು ಅಪರೂಪವಾಗಿ ಬದುಕಿದವರು ಇಳಕಲ್ಲ ಪೂಜ್ಯಶ್ರೀ ಡಾ. ಮಹಾಂತ ಶಿವಯೋಗಿಗಳು ಅರ್ಧ ಶತಮಾನದಷ್ಟು ನಾಡಿನಾದ್ಯಂತ ಸುತ್ತಾಡಿ ಧಾರ್ಮಿಕ ,ಸಾಮಾಜಿ–ಕ ಕ್ಷೇತ್ರಗಳಲ್ಲಿ ಬಸವತತ್ವದ ಗಟ್ಟಿ ಬೀಜಗಳನ್ನ ಬಿತ್ತಿದ ಪೂಜ್ಯ ಡಾ. ಮಹಾಂತ ಶಿವಯೋಗಿಗಳ ಕಾರ್ಯ ಶ್ಲಾಘನೀಯವಾದದ್ದು ಎಂದು ಹಿರಿಯ ಸಾಹಿತಿ ಶ್ರೀ ಶಿವಾನಂದ ದಾಶಾಳ ಹೇಳಿದರು.

ವಚನಪಿತಾಮಹಡಾ.ಫ.ಗು.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್ ಅಡಿಯಲ್ಲಿ ಶರಣ ಚೇತನ ಬಳಗ ಹಮ್ಮಿಕೊಂಡ ತಿಂಗಳ ಅಧ್ಯಾತ್ಮ ಜ್ಞಾನದಾಸೋಹ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಡಾ.ಮಹಾಂತ ಶಿವಯೋಗಿಗಳ ಜನ್ಮದಿನೋತ್ಸವ ಅಂಗವಾಗಿ ವ್ಯಸನಮುಕ್ತ ದಿನಾಚರಣೆಯ ವಿಷಯ ಕುರಿತು 12ನೆಯ ಉಪನ್ಯಾಸ ನೀಡಿ ಮಾತನಾಡಿದರು. ಪೂಜ್ಯ ಶ್ರೀಗಳು ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳಲ್ಲದೆ ವಿದೇಶಗಳಲ್ಲಿಯೂ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆಬಹುವಾಗಿಶ್ರಮಿಸಿದರು "ಇಳಕಲ್ಲ ಮಹಾಂತ ಜೋಳಿಗೆ" ನಮ್ಮ ನಾಡಿನಲ್ಲಿಯೇ ವಿಶೇಷವಾದದ್ದು. ಪೂಜ್ಯ ಶ್ರೀಗಳು ತಮ್ಮ ಜೋಳಿಗೆಯಲ್ಲಿ ಜನರ ವ್ಯಸನಗಳನ್ನು ಹಾಕಿರಿ ಎಂದು ಭಿಕ್ಷೆ ಬೇಡಿದರು ಇದರಿಂದ ಲಕ್ಷಾಂತರ ವ್ಯಸನಿಗಳು ಮುಕ್ತರಾಗಿ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು.

ಪೂಜ್ಯಶ್ರೀ ಮಹಾಂತ ಶಿವಯೋಗಿಗಳ ಸೇವೆಯನ್ನು ಸಮಾಜ ಸರಕಾರ ಗುರುತಿಸಿ ಅವರ ಜನ್ಮದಿನವನ್ನು ವ್ಯಸನ ಮುಕ್ತ ದಿನಾಚರಣೆ ಆಚರಿಸಬೇಕೆಂದು ಕರ್ನಾಟಕ ಸರಕಾರ ಆದ–ೇಶಿರಿರುವುದು ಅತ್ಯಂತ ಔಚಿತ್ಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ವಿಶೇಷ ಆಹ್ವಾನಿತರಾದ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಪುಷ್ಪಾ ಅಕ್ಕನವರು ಆದ–್ಯಾತ್ಮ ಜ್ಞಾನದಾಸೋಹ ಕಾರ್ಯಕ್ರಮಗಳು ಹೆಚ್ಚು ವ್ಯಾಪಕವಾಗಿ ನಡೆಯಬೇಕೆಂದು ಹೇಳಿದರು. ಪ್ರಾಧ್ಯಾಪಕ ಮನೋಹರ ಹೊಸಮನಿ ಮನುಷ್ಯನಿಗೆ ಸಂಸ್ಕಾರ, ಸಂಸ್ಕೃತಿ ಹೊಂದಲು ಇಂಥ ಕಾರ್ಯಕ್ರಮಗಳು ಅವಶ್ಯ ಮಕ್ಕಳು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದು ಅಗತ್ಯವಿದೆ ಎಂದರು ಟ್ರಸ್ಟ್ ಅಧ್ಯಕ್ಷರಾದ ಡಾ. ಬಿ ಎಂ ಪಾಟೀಲ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ತಿಂಗಳ ಆಧ್ಯಾತ್ಮ ಜ್ಞಾನದಾಸೋಹ ವಿಶೇಷ ಉಪನ್ಯಾಸ ಕಾರ್ಯಕ್ರಮ ಒಂದು ವರ್ಷ ನಿರಂತರ ನಡೆದುಕೊಂಡು ಬಂದಿರುವದನ್ನು ಸ್ಮರಿಸಿ ಹೆಮ್ಮೆ ವ್ಯಕ್ತಪಡಿಸಿದರು. ಸನ್ಮಾನಕನ್ನಡಹಂಪಿ ವಿಶ್ವವಿದ್ಯಾಲಯವು "ಕೃಷ್ಣಾ ತೀರದ ಕನ್ನಡಕಥನಸಾಹಿತ್ಯದಲ್ಲಿಸಾಂಸ್ಕೃತಿ–ಕ ವಿನ್ಯಾಸಗಳು" ಸಂಶೋಧನಾ ಪ್ರಬಂಧ ಮಾನ್ಯಗೊಳಿಸಿ ಡಾ. ಚಂದ್ರಕಾಂತ ಹೊಸೂರ ಅವ–ರಿಗೆ ಡಾಕ್ಟರೇಟ್ ಪದವಿ ನೀಡಿದ್ದಕ್ಕೆ ಮಾರ್ಗದರ್ಶಕರಾದ ಡಾ. ಬಿ ಎಂ. ಪಾಟೀಲ ಹಾಗೂ ಟ್ರಸ್ಟ್ ಅಭಿಮಾನಿಗಳ ಬಳಗ ಸನ್ಮಾನಿಸಿ ಗೌರವಿಸಿದರು.

ತಿಂಗಳ ಅಧ್ಯಾತ್ಮ ಜ್ಞಾನದಸೋಹ' ಕಾರ್ಯಕ್ರಮ ನಿರಂತರ ಒಂದು ವರ್ಷದ ಸಂದರ್ಭದಲ್ಲಿ ಡಾ ಬಿ ಎಂ ಪಾಟೀಲ ದಂಪತಿಗಳನ್ನು ಟ್ರಸ್ಟ್ ಅಭಿಮಾನಿ ಬಳಗದವರು ಸತ್ಕರಿಸಿ ಗೌರವಿಸಿದರು.

ಪ್ರಾಚಾರ್ಯ ಪಿ.ಬಿ. ಮುನ್ಯಾಳ, ಎಸ್,ಎಸ್, ಮೀಸಿ, ಎಚ್. ಎ. ಭಜಂತ್ರಿ ಡಿ.ಎಲ್. ಮಿರ್ಜಿ, ಬಿ.ಬಿ.ಕುಂಬಾರ ಎ. ಎಸ್. ಶಿರಗಾಂವೆ,ಬಿ. ಹೆಚ್.ಪಾಟೀಲ ಆರ್. ಸಿ. ದುಮಾಳೆ, ರಾಜು. ಕೋರೆ, ಭರತೇಶ್ ನಾಂದನಿ, ಬಾಲಚಂದ್ರ ಪಾಟಿಲ,ಎ. ಎಸ್. ಮುಗಳಖೋಡ, ಶಿಲ್ಪಶ್ರೀ ದೊಡವಾಡ,ಶಿವಗೌಡ ಪಾಟೀಲ ಮೊದಲಾದವರು ಉಪಸ್ಥಿತರಿದ್ದರು

ಕಾರ್ಯಕ್ರಮ ಆರಂಭದಲ್ಲಿ ಪಾವಣಿ ಮತ್ತು ಶಾಂಭವಿ ದೊಡವಾಡ ಪ್ರಾರ್ಥನೆ ಹಾಡಿದರು ಎಸ್. ಎಸ್. ಕಾಂಬಳೆ ಸ್ವಾಗತ ಕೋರಿದರು ಕಾಡೇಶ. ಐಹೊಳೆ ಕಾರ್ಯಕ್ರಮ ನಿರೂಪಣೆ ಮಾಡಿ ಶರಣು ಸಮರ್ಪಣೆ ಹೇಳಿದರು.

## ದೇಶದ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಬೇಕು



**ರಬಕವಿ–ಬನಹಟ್ಟಿ** : ಪ್ರತಿಯೊಬ್ಬ ಭಾರತೀಯ ದೇಶಾಭಿಮಾನವನ್ನು ಬೆಳೆಸಿಕೊಂಡು ದೇಶದ ರಕ್ಷಣೆಗೆ ಮುಂದಾಗಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಶುಕ್ರವಾರ ಸ್ಥಳೀಯ ಎಸ್ ಆರ್ ಎ ಮೈದಾನದಲ್ಲಿ ನಡೆದ 79 ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತ ಇಂದು ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಹೊಂದುತ್ತಿದೆ. ಮುಂದಿನ ದಿನಗಳಲ್ಲಿ ಭಾರತ ಆರ್ಥಿಕವಾಗಿ ಇನ್ನಷ್ಟು ಬಲಾಢ್ಯ ರಾಷ್ಟ್ರವಾಗಲಿದೆ. ದೇಶ ಉಳಿದರೆ ಮಾತ್ರ ನಮ್ಮ ಧರ್ಮ, ದೇವಾಲಯಗಳು ಮತ್ತು ನಮ್ಮ ಸಂಸ್ಕೃತಿ ಉಳಿಯಲು ಸಾಧ್ಯ. ದೇಶಕ್ಕಾಗಿ ನಾವು ಒಂದಿಷ್ಟಾದರೂ ಸೇವೆಯನ್ನು ಸಲ್ಲಿಸಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಧ್ವಜಾರೋಹಣ ನೆರವೇರಿಸಿದ ತಹಶೀಲ್ದಾರ್ ಗಿರೀಶ ಸ್ವಾದಿ ಮಾತನಾಡಿ, ಸ್ವಾತಂತ್ರ್ಯ ಹೋರಾಟಕ್ಕಾಗಿ ತ್ಯಾಗ ಬಲಿದಾನ ಮಾಡಿದವರನ್ನು ಸ್ಮರಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಯುವಕರು ಸ್ವಾತಂತ್ರ್ಯದ ಮಹತ್ವವನ್ನು ಅರಿತುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿವಿವಿಧಕ್ಷೇತ್ರದಲ್ಲಿಸಾಧನೆಗೈದ 23 ಸಾಧಕರನ್ನು ಸನ್ಮಾನಿಸಲಾಯಿತು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ, ಪೌರಾಯುಕ್ತ ರಮೇಶ ಜಾಧವ, ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಸಿಪಿಐ ಸಂಜೀವ ಬಳಿಗಾರ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವೆಂಕನಗೌಡ ಪಾಟೀಲ,

ಪಿಎಸ್ಐ ಶಾಂತಾ ಹಳ್ಳಿ, ಮಹಾಲಿಂಗಪುರ ಪಿಎಸ್ಐ ಕಿರಣ ಸತ್ತಿಗೇರಿ, ರಮೇಶ ಅವಟಿ, ಪ್ರಶಾಂತ ಹೊಸಮನಿ, ಮಲ್ಲಿಕಾರ್ಜುನ ಗಡೆನ್ನವರ, ಶಿರಸ್ತೆದಾರ ರಾಜಶೇಖರ ಸಾತಿಹಾಳ, ಪ್ರಕಾಶ ಮಠಪತಿ, ಸುರೇಶ ಚಿಂಡಕ, ನೀಲಕಂಠ ಮುತ್ತೂರ, ಸಂಗಪ್ಪ ಕುಂದಗೋಳ, ಶಿವಾನಂದ ಬಾಗಲಕೋಟಮಠ, ರಾಜೇಂದ್ರ ಭದ್ರನ್ನವರ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಆದಿ ಜಾಂಬವ ಸಂಘದಿಂದ ಸಚಿವ ಎಂ.ಬಿ. ಪಾಟೀಲರಿಗೆ ಮನವಿ



**ವಿಜಯಪುರ** : ಕರ್ನಾಟಕ ರಾಜ್ಯ ಆದಿಜಾಂಬವ ಸಂಘ ಜಿಲ್ಲಾ ಸಮಿತಿ ವತಿಯಿಂದ ಒಳ ಮೀಸಲಾತಿ ಅತಿ ಶೀಘ್ರವಾಗಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹನುಮಂತ ಬಿರಾದಾರ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಪ್ರಭು ಖಾನಾಪುರ ಸಂಘಟನೆಯ ಪದಾಧಿಕಾರಿಗಳಾದ ಪರಶುರಾಮ ರೋಣಿಹಾಳ, ಎಂ.ಆರ್. ದೊಡಮನಿ, ಲಚಪ್ಪ ಮಾದರ, ಬೆಳಗಾವಿ ವಿಭಾಗದ ಪ್ರಚಾರ ಸಮಿತಿ ಅಧ್ಯಕ್ಷ ಎಲ್. ಎಂ. ಬೆಳ್ಳುಳ್ಳಿ, ಪರಶುರಾಮ ಚಕ್ರವರ್ತಿ, ವಿಠಲ ಕವಲಗಿ, ಸಾಬು ಗುಣದಾಳ, ವಿಜಯ ಮಾದರ, ಸಮಾಜದ ಹಿರಿಯ ಮುಖಂಡರಾದ ಅಯ್ಯಪ್ಪ ದೊಡಮನಿ, ಪ್ರಶಾಂತ ದೊಡಮನಿ ಯಲ್ಲೂ ಇಂಗಳಗಿ, ಜಿ.ಕೆ. ಯತ್ನಾಳ ಇನ್ನೂ ಹಲವಾರು ಮುಖಂಡರು ಇದ್ದರು.

## ಕಲ್ಯಾಣ ಕರ್ನಾಟಕಕ್ಕೆ 'ಅಪ್ಪ' ಕೊಡುಗೆ ಅಪಾರ



**ಕಮಲಾಪುರ** : 'ನೂರಾರು ವರ್ಷಗಳ ಹಿಂದೆಯೆ ದೊಡ್ಡ ಶೈಕ್ಷಣಿಕ ಸಂಸ್ಥೆ ಸ್ಥಾಪಿಸಿ ಅನ್ನ ಅಕ್ಷರ ದಾಸೋಹ ನಡೆಸಿದ ಶರಣಬಸವಪ್ಪ ಅಪ್ಪ ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಗುರು ಮಾಟೂರ ಹೇಳಿದರು.

ಕಲಬುರಗಿಯ ಶರಣಬಸವೇಶ್ವರ ಸಂಸ್ಥಾನದ 8ನೇ ಪೀಠಾಧಿಪತಿ ಶರಣಬಸವಪ್ಪ ಅಪ್ಪ ನಿಧನ ಹಿನ್ನೆಲೆ ಪಟ್ಟಣದಲ್ಲಿ ಶುಕ್ರವಾರ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

ಶರಣಬಸವೇಶ್ವರ ಸಂಸ್ಥಾನದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ದೇಶ, ವಿದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳೆಯರು, ಬಡವರಿಗೆ ಉಚಿತ ಶಿಕ್ಷಣದ ಜೊತೆಗೆ ಸಾವಿರಾರು ಜನರಿಗೆ ಅವರ ಸಂಸ್ಥಾನದಲ್ಲಿ ಉದ್ಯೋಗ ಒದಗಿಸಿದ್ದಾರೆ. ಅಪ್ಪ ಅವರ ನಿಧನ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ' ಎಂದರು.

ಬಸವೇಶ್ವರ ವೃತ್ತದಿಂದ ಬಸ್ ನಿಲ್ದಾಣ ಪ್ರದೇಶದವರೆಗೆ ಶರಣಬಸವಪ್ಪ ಅಪ್ಪ ಅವರ ಭಾವಚಿತ್ರ ಮೆರವಣಿಗೆ ನಡೆಯಿತು. ವಿವಿಧ ರಾಜಕೀಯ ಮುಖಂಡರು, ಸಾರ್ವಜನಿಕರು ಪುಷ್ಪ ನಮನ ಸಲ್ಲಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ತಹಶೀಲ್ದಾರ್ ಮೊಹಮ್ಮದ್ ಮೋಸಿನ ಅಹಮ್ಮದ್, ಶಿವಕುಮಾರ ದೋಶೆಟ್ಟಿ, ಅಮರ ಚಿಕ್ಕೆಗೌಡ, ಉದಯ ಪಾಟೀಲ, ಸಂತೋಷ ರಾಂಪೂರ, ಶರಣು ರಟಕಲ್, ಬಸವರಾಜ ಚಿಕ್ಕೆಗೌಡ, ಅಶೋಕ ಸುಗೂರ, ಸಿದ್ದು ಕಶೆಟ್ಟಿ, ಬಸವರಾಜ ಸುಗೂರ, ಮೈನೋದ್ದಿನ ಗುಳಿ, ಚೆನ್ನಬಸಪ್ಪ ಮುನ್ನಳ್ಳಿ, ಆನಂದ ವಾರಿಕ, ಸುರೇಶ ರಾಠೋಡ, ನಾಗರಾಜ ಹುಣಚಿಗಿಡ, ಸಂತೋಷ ಕಲ್ಯಾಣ, ಗುರು ಬಮ್ಮಣ, ನಟರಾಜ ಕಲ್ಯಾಣ, ಶರಣಬಸಪ್ಪ ಜೀವಣಗಿ ಸಂತೋಷ ಮುಗಳಿ, ಅಮೃತ
ಗೌರೆ, ಶರಣು ಗೌರೆ, ಗಿರೆಪ್ಪ ಶಾಖಾ, ರವಿ ಬಿ.ಕೆ., ಅಶೋಕ ಗೌರೆ, ಹಿತೇಶ, ಆನಂದ ಚಿನ್ನಿರಾಠೋಡ ಮತ್ತಿತರರಿದ್ದರು.

# ವಿಕಲಚೇತನರ ನೆರವಿಗೆ ಧಾವಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ: ಎಂ.ಬಿ. ಪಾಟೀಲ



**ವಿಜಯಪುರ** : ವಿಕಲಚೇತನರಿಗೆ ನೆರವಾಗುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಕೈಗಾರಿಕೆ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಶುಕ್ರವಾರ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಕಾನೂನು ಮಹಾವಿದ್ಯಾಲಯ ಸಭಾಂಗಣದಲ್ಲಿ ಭಾರತ ಪೆಟ್ರೋಲಿಯಂ ಕಾರ್ಪೋರೇಶನ್ ಲಿಮಿಟೆಡ್(ಬಿ.ಪಿ.ಸಿ.ಎಲ್) ಸಿ.ಎಸ್.ಆರ್ ಯೋಜನೆಯಡಿಯಲ್ಲಿ 80ಕ್ಕೂ ಹೆಚ್ಚು ವಿಕಲಚೇತನರಿಗೆ(ದಿವ್ಯಾಂಗರಿಗೆ) ಕೃತಕ ಅಂಗಾಗಗಳು ಮತ್ತು ಶ್ರವಣ ಸಾಧನಗಳನ್ನು ವಿತರಿಸಿ ಅವರು ಮಾತನಾಡಿದರು.

ಅಪಘಾತಗಳು ಮತ್ತು ಆರೋಗ್ಯ ಚಿಕಿತ್ಸೆ ಸಂದರ್ಭಗಳಲ್ಲಿ ಅಂಗವಿಕಲತೆ ಎದುರಾಗುವ ಸಾಧ್ಯತೆಗಳಿದ್ದು, ಇವುಗಳ ಬಗ್ಗೆ ಜಾಗೃತಿ ಮೂಡಿಸಬೇಕು. ವಿಕಲಚೇತನರ ಕಲ್ಯಾಣಕ್ಕೆ ಸರಕಾರಗಳು ಯೋಜನೆಗಳನ್ನು ರೂಪಿಸುತ್ತವೆ. ಸರಕಾರಗಳ ಜೊತೆ ಸಂಘ–ಸಂಸ್ಥೆಗಳೂ ಕೈಜೋಡಿಸಬೇಕು. ಬಿ.ಪಿ.ಸಿ.ಎಲ್ ನವರು ಸಿ.ಎಸ್.ಆರ್ ಅನುದಾನವನ್ನು ನೀಡುವ ಮೂಲಕ ನೆರವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಇನ್ನೂ ಬಾಕಿ ಉಳಿದಿರುವ ಫಲಾನುಭವಿಗಳ ಬಗ್ಗೆ ಜಿಲ್ಲಾ, ತಾಲೂಕು ಆಸ್ಪತ್ರೆಗಳ ಮೂಲಕ ಮಾಹಿತಿ ಸಂಗ್ರಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ಸಚಿವರು ತಿಳಿಸಿದರು.

ಎಲ್ಲ ಧರ್ಮಗಳಲ್ಲಿಯೂ ಪರೋಪಕಾರ ಮತ್ತು ದಾನದ ಬಗ್ಗೆ ಪ್ರಸ್ತಾಪವಿದೆ. ಅಂಗವಿಕಲರಿಗೆ ಸಹಾನುಭೂತಿ ತೋರಿಸುವ ಬದಲು ಅವರಿಗೆ ನೆರವಾಗಬೇಕು ಎಂಬ ಸದುದ್ದೇಶದಿಂದ ಬಿ.ಎಲ್.ಡಿ.ಇ ಸಂಸ್ಥೆಯಲ್ಲಿ 1992ರಲ್ಲಿ ರಾಜ್ಯದ ಮೊದಲ ಜಿಲ್ಲಾ ವಿಕಲಚೇತನ ಮತ್ತು ಪುನರ್ವಸತಿ ಕೇಂದ್ರವನ್ನು ಪ್ರಾರಂಭಿಸಲಾಯಿತು. ಅಂದಿನ ಖ್ಯಾತ ವೈದ್ಯ ಡಾ. ಶಿವರಾಮಪ್ಪ ಅವರು ಮೊಹಂತಿ ಅವರ ಸಹಯೋಗದಲ್ಲಿ ಈ ಕೇಂದ್ರವನ್ನು ಸಮರ್ಥವಾಗಿ ಮುನ್ನಡೆಯೆಲು ಭದ್ರ ಬುನಾದಿ ಹಾಕಿದರು. ಅಂದಿನಿಂದ ಇಂದಿನವರೆಗೂ ಈ ಸಂಸ್ಥೆ ಅಂಗವಿಕಲರು, ಶ್ರವಣದೋಷ ಹೊಂದಿದವರಿಗೆ ಕೃತಕ ಅಂಗಾಂಗ ಮತ್ತು ಸಲಕರಣೆ ಒದಗಿಸುವ ಕೆಲಸ ಅವರಿಗೆ ನೆರವಾಗುವ ಕೆಲಸ ಮಾಡುತ್ತಿದೆ. ಬಿ.ಎಲ್.ಡಿ.ಇ ಸಂಸ್ಥೆ ಸಮಾಜಮುಖಿ ಕಾರ್ಯಗಳಿಗೆ ಸದಾ ಮುಂಚೂಣಿಯಲ್ಲಿದ್ದು, ಮಹಿಳಾ ವಿವಿಗೆ ರೂ. 50 ಲಕ್ಷ ಆರ್ಥಿಕ ನೆರವು ನೀಡಿದೆ. ವೃಷಥಾನ್ ಗೆ ಪ್ರತಿವರ್ಷ ರೂ. 25 ಲಕ್ಷ ಸಹಾಯಧನ ನೀಡುತ್ತಿದೆ. ಪ್ರತಿವರ್ಷ ಸರಕಾರಿ ಕೋಟಾದಡಿ ಆಯ್ಕೆಯಾಗುವ ಬಡ ಮತ್ತು ಪ್ರತಿಭಾವಂತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ಹಾಸ್ಟೆಲ್ ಮತ್ತು ವಿದ್ಯಾಭ್ಯಾಸಕ್ಕೆ ಅಗತ್ಯವಾದ ಆರ್ಥಿಕ ನೆರವು ನೀಡುತ್ತಿದೆ.

ಅಷ್ಟೇ ಅಲ್ಲ ಈಗ ಕೈಗಾರಿಕೆ ಸಚಿವನಾಗಿ ಸಿ.ಎಸ್.ಆರ್ ಅನುದಾನದಡಿ ಸರಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸುತ್ತಿದ್ದೇನೆ. ಮುಂಬರುವ ದಿನಗಳಲ್ಲಿ ಜಿಲ್ಲೆಯ ಎಲ್ಲ ಮತಕ್ಷೇತ್ರಗಳ ಸರಕಾರಿ ಶಾಲೆಗಳಿಗೂ ಸಿ.ಎಸ್.ಆರ್ ಅನುದಾನ ನೀಡಲಾಗುವುದು ಎಂದು ಅವರು ಹೇಳಿದರು.

ಬಿ.ಪಿ.ಸಿ.ಎಲ್ ಕರ್ನಾಟಕ ಚೀಫ್ ಮ್ಯಾನೇಜರ್ ವೆಂಕಟೇಶ ಮಾತನಾಡಿ, ಈ ಮೊದಲು ನಾವು ಸಿ.ಎಸ್.ಆರ್ ಅನುದಾನ ನೀಡುವಾಗ ಎಲ್ಲ ಸಂಘ– ಸಂಸ್ಥೆಗಳು ತಮ್ಮ ವೈಯಕ್ತಿಕವಾಗಿ ನೆರವು ಕೇಳುತ್ತಿದ್ದವು.

ಆದರೆ, ಸಚಿವ ಎಂ. ಬಿ. ಪಾಟೀಲ ಅವರು ಮಾತ್ರ ತಮ್ಮ ಬಿ.ಎಲ್.ಡಿ.ಇ ಸಂಸ್ಥೆಗೆ ನೆರವು ಕೇಳುವ ಬದಲು ಜಿಲ್ಲೆಯ ಜನರ ಕಲ್ಯಾಣಕ್ಕಾಗಿ ಈ ಹಣ ಬಳಸಲು ಕೇಳಿದರು. ಇದು ತಮಗೆ ಅಚ್ಚರಿಯ ಜೊತೆಗೆ ಸಂತೋಷವನ್ನು ತಂದಿದೆ. ಸಿ.ಎಸ್.ಆರ್ ನಡಿ ಒಟ್ಟು ರೂ. 50 ಲಕ್ಷ ವೆಚ್ಚದ ಸಲಕರಣೆಗಳನ್ನು ನೀಡಲಾಗುತ್ತಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ನೀಡಲು ಬಿ.ಪಿ.ಸಿ.ಎಲ್ ಸಿದ್ಧವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ವಿಕಲಚೇತನ ಮತ್ತು ಪುನರ್ವಸತಿ ಕೇಂದ್ರದ ನೋಡಲ್ ಅಧಿಕಾರಿ ಡಾ. ಈಶ್ವರ ಭಾಗೋಜಿ, ಬಿಪಿಸಿಎಲ್ ಕರ್ನಾಟಕ ಚೀಫ್ ಮ್ಯಾನೇಜರ್ ವೆಂಕಟೇಶ,
ಅಲಿಮ್ಕೊ ಕಂಪನಿಯ ಅಭಿಷೇಕಕುಮಾರ ಆನಂದ, ಶ್ರವಣದೋಷ ತಂತ್ರಜ್ಞ ಕಿಶನಕುಮಾರ,
ಟೆಕ್ನಿಶಿಯನ್ ಸೋನು ಕುಮಾರ ಅವರನ್ನು ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ, ಜಿಲ್ಲಾಧಿಕಾರಿ ಡಾ. ಆನಂದ ಕೆ., ಎಸ್ಪಿ ಲಕ್ಷ್ಮಣ ನಿಂಬರಗಿ, ಜಿ. ಪಂ. ಸಿಇಒ ರಿಷಿ ಆನಂದ, ಬಿ.ಎಲ್.ಡಿ.ಇ ಡೀಮ್ಡ್ ವಿವಿ ಸಮಕುಲಾಧಿಪತಿ ಡಾ. ವೈ.ಎಂ. ಜಯರಾಜ, ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ,
ಕೃತಕ ಅಂಗಾಂಗ ತಯಾರಿಕೆ ಎಂಜಿನಿಯರ್ ಕರಣ ಸಿ. ಮೊಹಾಂತಿ, ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿ ಜಗದೀಶ ಕೆಂಪಲಿಂಗಣ್ಣವರು, ಡಿಡಿಆರ್ ಸಿ ಅಕೌಂಟೆಂಟ್ ಜಿ. ಎಂ. ದೇಶಪಾಂಡೆ ಮುಂತಾದವರು ಉಪಸ್ಥಿತರಿದ್ದರು. ಸುಭಾಷ ಕನ್ನೂರ ನಿರೂಪಿಸಿ ವಂದಿಸಿದರು.

## ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದ್ದ ತನ್ನ ಎತ್ತುಗಳನ್ನು ರಕ್ಷಿಸಿ ಸಾಹಸ ಮೆರೆದ ರೈತ!



**ತಾಳಿಕೋಟೆ** : ತಾಲ್ಲೂಕಿನ ಹರನಾಳ ಗ್ರಾಮದಲ್ಲಿ ಯುವಕನೊಬ್ಬ ಡೋಣಿ ನದಿ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದ್ದ ತನ್ನೆರಡು ಎತ್ತುಗಳನ್ನು ರಕ್ಷಿಸಿ ಸಾಹಸ ಮೆರೆದಿದ್ದಾರೆ. ಈ ಘಟನೆ ಸೋಮವಾರ ನಡೆದಿದೆ.

ರೈತ ಮಾಳಪ್ಪ ಬಿರಾದಾರ ಡೋಣಿ ನದಿಗೆ ತನ್ನೆರಡು ಎತ್ತುಗಳನ್ನು ಸ್ನಾನ ಮಾಡಿಸಲೆಂದು ಕರೆದೊಯ್ದು ಸಂದರ್ಭದಲ್ಲಿ
ತುಂಬಿ ಹರಿಯುತ್ತಿದ್ದ ಡೋಣಿ ನದಿಯ ಪ್ರವಾಹದ ಸೆಳೆತಕ್ಕೆ ಸಿಲುಕಿವೆ. ಆದರೆ, ಜೀವನಕ್ಕೆ ಆಸರೆಯಾದ ಎತ್ತುಗಳನ್ನು ದೂರಮಾಡಿಕೊಳ್ಳಲು ಇಚ್ಛಿಸದ ರೈತ ಮಾಳಪ್ಪ ಬಿರಾದಾರ ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಕೊಚ್ಚಿ ಹೋಗುತ್ತಿದ್ದ ಎತ್ತುಗಳ ಹಿಂದೆ ಈಜುತ್ತ ಬೆಂಬತ್ತಿ ಒಂದರ ನಂತರ ಒಂದರಂತೆ ಎರಡೂ ಎತ್ತುಗಳನ್ನು ಸಂರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾನೆ.

ಈ ಘಟನೆಯನ್ನು ಕಣ್ಣಾರೆ ಕಂಡ ಗ್ರಾಮಸ್ಥರು, "ಮಾಳಪ್ಪ ಬಿರಾದಾರನ ಈ ಸಾಹಸಕ್ಕೆ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಗ್ರಾಮದ ಮುತ್ತು ಚಳ್ಳಗಿ, ಹನುಮಂತರಾಯ ಬಿರಾದಾರ,
ಮಲ್ಲಣ್ಣ ಚಳ್ಳಗಿ, ವೆಂಕಪ್ಪ ಯಡಹಳ್ಳಿ, ಶಂಕ್ರಪ್ಪ ಚಳ್ಳಗಿ, ಈರಪ್ಪ ಅಂಬಳನೂರ,
ಭೀಮಾಶಂಕರ ತುಂಬಗಿ, ತಾಳಿಕೋಟಿ ಸಾಮಾಜಿಕ ಕಾರ್ಯಕರ್ತೆಯರಾದ ತಾರಾಬಾಯಿ ಹಜೇರಿ, ಮೀನಾಕ್ಷಿ ರಜಪೂತ ಮತ್ತಿತರರು ಒತ್ತಾಯಿಸಿದರು.

# ರನ್ನಬೆಳಗಲಿ ವಲಯ ಮಟ್ಟದ ಪ್ರೌಢ ಶಾಲೆಗಳ ಕ್ರೀಡಾಕೂಟ

**ಮಹಾಲಿಂಗಪುರ** : ಕ್ರೀಡೆಗಳು ಆರೋಗ್ಯಕ್ಕೆ ವರದಾನವಾಗಿವೆ. ಕ್ರೀಡಾಪಟುಗಳು, ತರಬೇತುದಾರರು ನಿರ್ಣಾಯಕರ ನಿರ್ಣಯಗಳನ್ನು ಗೌರವಿಸಬೇಕು ಎಂದು ಮುಧೋಳ ಶಿಕ್ಷಣಾಧಿಕಾರಿ ಎಸ್. ಎಂ. ಮುಲ್ಲಾ ಹೇಳಿದರು.

ಸಮೀಪದ ರನ್ನಬೆಳಗಲಿ ಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕ್ರೀಡಾಂಗಣದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಮುಧೋಳ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆ ರನ್ನಬೆಳಗಲಿ ಸಂಯುಕ್ತ ಆಶ್ರಯದಲ್ಲಿ 2025–26 ನೇ ಸಾಲಿನ ರನ್ನಬೆಳಗಲಿವಲಯಮಟ್ಟದಪ್ರೌಢಶಾಲೆಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಸುಂದರವಾದ ಅಚ್ಚುಕಟ್ಟಾದ ಮೈದಾನವನ್ನು ಒಳಗೊಂಡ ಎಂಡಿ ಆರ್.ಎಸ್. ಶಾಲೆಯು ಕ್ರೀಡಾಪಟುಗಳಿಗೆ



ಸ್ಫೂರ್ತಿಯನ್ನು ನೀಡುತ್ತಿದೆ. ಕ್ರೀಡೆಗಳಿಂದ ವ್ಯಕ್ತಿತ್ವ ಅರಳಬೇಕು. ಸಾಮರಸ್ಯ, ಪ್ರೀತಿ, ಒಗ್ಗಟ್ಟಿನ ಪ್ರತಿಕವೇ ಕ್ರೀಡಾಕೂಟಗಳು ಎಂದರು.

ತಾಲೂಕಾದ್ಯೆಹಿಕಶಿಕ್ಷಣಪರಿವೀಕ್ಷಣಾಧಿಕಾರಿ ಶ್ರೀಶೈಲ ಕುರಣಿ ಮಾತನಾಡಿ ಪ್ರತಿ ಕ್ರೀಡಾಪಟುಗಳಿಗೆ ಸಮಯಪ್ರಜ್ಞೆ, ಶಿಸ್ತು ಪಾಲನೆಯ ನಿಯಮಗಳ ಬಗ್ಗೆ ಅರಿವು ಹೊಂದಿರಬೇಕು. ಆಟಗಳಲ್ಲಿ ಸೋಲು ಗೆಲುವು ಮುಖ್ಯವಲ್ಲ. ಭಾಗವಹಿಸುವಿಕೆ ಅತಿ ಮುಖ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಎಂ. ವ್ಹಿ. ಸೊಪ್ಪಿಮಠ ಮಾತನಾಡಿ ಕ್ರೀಡಾಕೂಟದ ಯಶಸ್ವಿಗೆ ಸಮುದಾಯದ ಸಹಕಾರ ಅಮೂಲ್ಯವಾಗಿದೆ. ನಿತ್ಯ ಜೀವನದಲ್ಲಿ ಕ್ರೀಡೆಗಳನ್ನು ಹವ್ಯಾಸವನ್ನಾಗಿಸಿಕೊಳ್ಳಿ. ಉತ್ತಮ ಹವ್ಯಾಸಗಳೇ ಉತ್ತಮ ನಾಯಕನನ್ನು ರೂಪಿಸುತ್ತದೆ ಎಂದರು.

ದೈಹಿಕ ಶಿಕ್ಷಕರಾದ ನಾಗೇಂದ್ರ ನಾಗವೇಕರ ಕ್ರೀಡಾ ಪ್ರತಿಜ್ಞಾವಿಧಿ ಬೋಧಿಸಿದರು. ಪಟ್ಟಣ ಪಂಚಾಯತ ಅಧ್ಯಕ್ಷೆ ರೂಪಾ ಹೊಸಟ್ಟಿ ಗುಂಪು ಆಟಗಳಿಗೆ ಚಾಲನೆ ನೀಡಿದರು.

ಪರಮಾನಂದ ಸಂಕ್ರಟ್ಟಿ, ಎಸ್. ಎಮ್. ಸುತಾರ, ಕೆ. ಬಿ. ಕುಂಬಾಳಿ, ಕಾಶಿನಾಥ ಕೂಗಾಟೆ, ಸಂಗಪ್ಪ ರಾಮದುರ್ಗ, ಮಹಾಲಿಂಗಪ್ಪ ಹೇಗಾಡಿ,
ಗಜಾನಂದ ಶಿರೋಳ, ಮುತ್ತಪ್ಪ ಸಂಕ್ರಟ್ಟಿ, ಶಿಕ್ಷಕರಾದ ರಾಹುಲ ಸಾಗರ, ನಿಂಗಪ್ಪ ಜಂಗಾಲಿ, ಎಮ್. ಬಿ. ತೇರದಾಳ, ಶೃತಿ ಪೋಲಿಸನವರ, ಶಿಲ್ಪಾ ಹಾರೂಗೇರಿ, ಗಜಾನನ ಗಾಜಾರ, ಸುರೇಶಕುಮಾರ ಮುದಕನ್ನವರ, ಕಾಂತು ಕಲಶೆಟ್ಟಿ, ವಿಲಾಸ ಆರ್. ಎಣ್ಣೆ, ಜಿ. ಎಮ್. ಮಠಪತಿ, ಶಿವಶಂಕರಯ್ಯ ವಿರಕ್ತಮಠ, ಯಲ್ಲಪ್ಪಾ ಶಿರಗಾಂವಿ ಉಪಸ್ಥಿತರಿದ್ದರು.

ನಿಲಯ ಪಾಲಕರಾದ ಕೆ. ಎಸ್. ಉಳ್ಳಾಗಡ್ಡಿ ಸ್ವಾಗತಿಸಿ, ನಿರೂಪಿಸಿದರು. ಸ್ಥಳೀಯ 12 ಪ್ರೌಢ ಶಾಲೆಗಳ ಕ್ರೀಡಾಪಟುಗಳು, ಮಾರ್ಗದರ್ಶಿ ಶಿಕ್ಷಕರು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

## ಸೈದಾಪುರ ಪಿಕೆಪಿಎಸ್ಗೆ ಉಳ್ಳಾಗಡ್ಡಿ ಅಧ್ಯಕ್ಷ, ಪಾಶ್ಚಾಪೂರ ಉಪಾಧ್ಯಕ್ಷ



**ಮಹಾಲಿಂಗಪುರ** : ಸಮೀಪದ ಸೈದಾಪುರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಜರುಗಿತು.

ಉಳಿದ ಅವಧಿಗೆ ನೂತನ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಪರಮಾನಂದ ಮಲ್ಲಪ್ಪ ಉಳ್ಳಾಗಡ್ಡಿ ಹಾಗೂ ಉಪಾಧ್ಯಕ್ಷರಾಗಿ ಮುತ್ತಪ್ಪ ಮಲ್ಲಪ್ಪ ಪಾಶ್ಚಾಪೂರ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಗಿರಿಗೌಡ ನಂದಿಗೌಡ್ರ ತಿಳಿಸಿದರು.

ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಿ ಅಭಿನಂದಿಸಲಾಯಿತು. ನಿರ್ದೇಶಕರಾದ ಮಹಾಲಿಂಗಪ್ಪ ಸನದಿ, ಬಸವಣ್ಣೆಪ್ಪ ಬ್ಯಾಳಿ, ಸುರೇಶ ಬಾಯಪ್ಪಗೋಳ, ಸಿದ್ಧಾರೂಢ ಕೌಜಲಗಿ, ವಿವೇಕಾನಂದ ಸೋಲೋನಿ, ಬಸಪ್ಪ ಸಸಾಲಟ್ಟಿ, ಅಶೋಕ ಪಾಶ್ಚಾಪೂರ, ವಿಶಾಲ ತೆಗ್ಗಳ್ಳಿ, ಲಕ್ಷ್ಮೀಬಾಯಿ ಉಳ್ಳಾಗಡ್ಡಿ, ಲಕ್ಷ್ಮೀ ದ್ಯಾವನ್ನಗೋಳ, ಮುಖ್ಯ ಕಾರ್ಯನಿರ್ವಾಹಕ ಬಸಪ್ಪ ಗೌರವ್ವಗೋಳ ಹಾಗೂ ಹಿರಿಯರಾದ ಮುತ್ತಪ್ಪ ನಾಯ್ಕ, ಶಿವಪ್ಪ ಬಾಯಪ್ಪಗೋಳ, ಮಲ್ಲಗೌಡ ಪಾಟೀಲ, ಶಿವಲಿಂಗಪ್ಪ ಕೌಜಲಗಿ,
ಸುರೇಶ ಮಲಾಬಾದಿ, ರಮೇಶ ಬಾಯಪ್ಪಗೋಳ, ಚಿನ್ನಪ್ಪ ಬಾಯಪ್ಪಗೋಳ, ಮುರಿಗೆಪ್ಪ ಗುಣದಾಳ, ಲಕ್ಷ್ಮಣ ಉಳ್ಳಾಗಡ್ಡಿ, ರಾಮಗೌಡ ಪಾಟೀಲ, ಶಿವಲಿಂಗಪ್ಪ ಉಳ್ಳಾಗಡ್ಡಿ ಉಪಸ್ಥಿತರಿದ್ದರು.

## ವಿನಾಯಕ ಅರ್ಬನ್ ಕ್ರೆಡಿಟ್ ಸೌಹಾರ್ದ ಸಂಘಕ್ಕೆ 22 ಲಕ್ಷ ರೂ. ಲಾಭ

**ಮಹಾಲಿಂಗಪುರ** : ಪಟ್ಟಣದ ವಿನಾಯಕ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು 2024–25 ನೇ ಸಾಲಿನಲ್ಲಿ 22,74,318 ರೂ. ಗಳ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಸಂತೋಷ ಹುದ್ದಾರ ಹೇಳಿದರು.

ಸಂಘದ ಕಛೇರಿಯಲ್ಲಿ ಜರುಗಿದ ಏಳನೇ ವರ್ಷದ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಂಘದ ಆಡಳಿತ ಮಂಡಳಿಯ ಸರ್ವ ಸದಸ್ಯರ ಸಹಕಾರ, ಸಿಬ್ಬಂದಿಯ ಪ್ರಾಮಾಣಿಕ ಕೆಲಸದಿಂದ ನಮ್ಮ ಸಂಘವು ವರ್ಷದಿಂದ ವರ್ಷಕ್ಕೆ ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದೆ ಎಂದರು.

ಸಂಘದ ಮುಖ್ಯ ಕಾರ್ಯನಿರ್ವಾಹಕ ಶ್ರೀಕಾಂತ ನಾಶಿ ವಾರ್ಷಿಕ ವರದಿಯನ್ನು ವಾಚಿಸಿದರು. ಅವರು ಸಂಘವು ಒಟ್ಟು 1,160



ಸದಸ್ಯರನ್ನು ಹೊಂದಿದೆ. ಒಟ್ಟು 12,41,000 ಲಕ್ಷ ರೂ. ಶೇರ ಬಂಡವಾಳ ಹೊಂದಿದೆ. ಒಟ್ಟು 8,47,09,843 ರೂ. ಠೇವುಗಳನ್ನು ಹೊಂದಿದೆ. ಒಟ್ಟು 7,93,21,512 ರೂ . ಸಾಲವನ್ನು ವಿತರಿಸಲಾಗಿದೆ. ಸಂಘವು ಗ್ರಾಹಕರಿಗೆ ತ್ವರಿತ ಮತ್ತು ಗುಣಮಟ್ಟದ ಸೇವೆಯನ್ನು ನೀಡುತ್ತಿದೆ. ಸಂಘದಲ್ಲಿ ಆರ್ಟಿಜಿಎಸ್, ನೆಫ್ಟ ಮತ್ತು ಬಾಂಡ್ ವಿತರಣೆ ಸೌಲಭ್ಯವಿದೆ. ಸಾಲ ಪಡೆದ ಸದಸ್ಯರು ಸಕಾಲಕ್ಕೆ ಸಾಲ ಮರುಪಾವತಿ ಮಾಡಿ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದರು.

ಮಹಾಲಿಂಗಪುರ ತಾಲ್ಲೂಕು ಹೋರಾಟ ಸಮಿತಿ ಅಧ್ಯಕ್ಷ ಸಂಗಪ್ಪ ಹಲ್ಲಿ, ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷ ಬಸವರಾಜ ಪಾಟೀಲ, ಸದಸ್ಯರಾದ ಮಹಾಲಿಂಗಪ್ಪ ಜಕ್ಕನ್ನವರ, ಗಂಗಪ್ಪ ಮೇಟಿ, ಕರೆಪ್ಪ ಮೇಟಿ, ಮಹಾಂತೇಶ ಜಾಲಿಕಟ್ಟಿ, ಮಲ್ಲಿಕಾರ್ಜುನ ಕಡಕೋಳ, ಬಂದೇನಮಾಜ ಪಕಾಲಿ, ಬಸವರಾಜ ಬಂಡಿವಡ್ಡರ, ಸೀಮಂತ ಕರಿಗಾರ, ಶ್ರೀಮತಿ ಸವಿತಾ ಬ್ಯಾಕೂಡ, ಶ್ರೀಮತಿ ರೂಪಾ ನಾಶಿ, ಸಂಘದ ವ್ಯವಸ್ಥಾಪಕ ಸದಾಶಿವ ಅಂಗಡಿ, ಸಿಬ್ಬಂದಿ ಕಾವೇರಿ ಚನಪನ್ನವರ, ಸುನೀಲ ಮೇಟಿ, ಮಲ್ಲಪ್ಪ ಬ್ಯಾಕೂಡ, ಶೈಲೇಶ ಒಂಟಗೋಡಿ, ಪ್ರಕಾಶ ಮೇಟಿ, ಬಸವರಾಜ ಬ್ಯಾಕೂಡ, ಕವಿತಾ ಮೇಟಿ, ಬಸವರಾಜ ಅಂಗಡಿ, ಮಹಾಲಿಂಗಪ್ಪ ಅವಟಿ ಸೇರಿದಂತೆ ಇನ್ನೂ ಹಲವರು ಪಾಲ್ಗೊಂಡಿದ್ದರು.

## ಆರ್.ಡಿ.ಎಸ್. ಕಾಲೇಜಿನಲ್ಲಿ ನಶಾ ಮುಕ್ತ ಭಾರತದ ಅಭಿಯಾನ

**ಮೂಡಲಗಿ** : ಮಾದಕ ವಸ್ತು ಸೇವನೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವದಲ್ಲದೆ ಅನಾರೋಗ್ಯಕ್ಕೆ ಕೂಡ ಕಾರಣವಾಗುತ್ತದೆ. ಇಂದಿನ ಯುವಕರು ಡ್ರಗ್ಸ್, ತಂಬಾಕು, ಗಾಂಜಾ ಹಾಗೂ ಮಧ್ಯಪಾನಗಳ ದುಶ್ಚಟಕ್ಕೆ ಬಲಿಯಾಗುತ್ತಿದ್ದು ಅವುಗಳ ಸೇವನೆ ಮಾಡುವುದ–ರಿಂದ ಯುವಕರು ಹಾಳಾಗುತ್ತಿದ್ದಾರೆ. ಇಂಥ ದುಶ್ಚಟಗಳಿಂದ ಯುವಕರು ದೂರ ಇರುವ ಹಾಗೆ ಮಾಡುವುದು ಇಂದು ಅವಶ್ಯಕವಿದೆ ಎಂದು ಆರ್.ಡಿ. ಎಸ್. ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸಂತೋಷ ಪಾರ್ಶಿ ಹೇಳಿದರು.

ಪಟ್ಟಣದ ಆರ್.ಡಿ.ಎಸ್. ಕಲಾ, ವಾಣಿಜ್ಯ, ವಿಜ್ಞಾನ ಪದವಿ ಮಹಾವಿದ್ಯಾಲಯ ಹಾಗೂ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯಗಳ ಸಂಂ–ಮುಕ್ತಾಶ್ರಯದಲ್ಲಿ ಆಯೋಜಿಸಿದ್ದ ನಶಾ ಮುಕ್ತ ಭಾರತದ ಅಭಿಯಾನದ ಮಾದಕ ವಸ್ತು ಸೇವನೆ ಮಾಡದಿರಲು ಪ್ರತಿಜ್ಞೆ ಸ್ವೀಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮ್ಮ ಮನೆ ಕುಟುಂಬ ಹಾಗೂ ಸಮುದಾಯದ ಆರೋಗ್ಯ ಕಾಪಾಡಲು ಮಾದಕ ವಸ್ತುಗಳಿಂದ ನಾವೆಲ್ಲರೂ ದೂರ ಇರೋಣ; ಭಾರತ ಸರಕಾರ ಯುವ ಸಮುದಾಯದ ಆರೋಗ್ಯಕ್ಕಾಗಿ ಮಾದಕ ವಸ್ತು ಸೇವನೆಯ ಪರಿಣಾಮಗಳು ಕುರಿತು ಜಾಗೃತಿಯನ್ನು ಹಮ್ಮಿಕೊಂಡು ಪ್ರತಿಯೊಬ್ಬರಿಗೆ ತಿಳಿವಳಿಕೆ ನೀಡುವುದು ಅದರ ಜೊತೆಗೆ ನಾವೆಲ್ಲರೂ ಪ್ರತಿಜ್ಞೆ ಸ್ವೀಕರಿಸಿ ಅದರಂತೆ ನಡೆದುಕೊಳ್ಳೋಣ ಎಂದರು.

ಉಪನ್ಯಾಸಕ ಎಸ್. ಎನ್. ಕುಂಬಾರ ಪ್ರತಿಜ್ಞಾ ವಿಧಿ ಬೋಧಿಸಿದರು. ಪ್ರಾಚಾರ್ಯ ಸತೀಶ ಗೋಟೂರೆ, ಶಿವಾನಂದ ಸತ್ತಿಗೇರಿ ಹಾಗೂ ಕಾಲೇಜಿನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಪ್ರತಿಜ್ಞೆಯನ್ನು ಸ್ವೀಕರಿಸಿದರು.

## ತುಳಜಪ್ಪ ದೇಸ್ತೋಟ ನಿಧನ



**ತೇರದಾಳ** : ಇಲ್ಲಿನ ಪ್ರತಿಷ್ಠಿತ ಸಿದ್ಧೇಶ್ವರ ವಿದ್ಯಾವರ್ಧಕ ಸಂಘದ ಮಾಜಿ ಅಧ್ಯಕ್ಷ, ಮಾಳಿ ಸಮಾಜದ ಹಿರಿಯರಾದ ತುಳಜಪ್ಪ ರಾಯಪ್ಪ ದೇಸ್ತೋಟ ತಮ್ಮ 85 ನೆಯ ವಯಸ್ಸಿನಲ್ಲಿ ನಿಧನರಾದರು. ಮೃತರು ತಮ್ಮ ಹಿಂದೆ ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ತುಳಜಪ್ಪ ದೇಸ್ತೋಟ ಅವರ ನಿಧನಕ್ಕೆ ಶಾಸಕ ಸಿದ್ದು ಸವದಿ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಮಾಳಿ ಸಮಾಜದ ರಾಜ್ಯಾಧ್ಯಕ್ಷ ಕಾಡು ಮಾಳಿ, ಸಿದ್ಧೇಶ್ವರ ವಿದ್ಯಾವರ್ಧಕ ಸಂಘದ ಎಲ್ಲ ಆಡಳಿತ ಮಂಡಳಿಯವರು, ಸಿಬ್ಬಂದಿಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

## ರಬಕವಿಯ ಸಂತೋಷ ಹುಲಗಬಾಳಿ ಡಿಓಎಜೆಗೆ ಆಯ್ಕೆ



**ರಬಕವಿ** : ಅಂತರಾಷ್ಟ್ರೀಯ ಪ್ರತಿಷ್ಠಿತ ಡೈರೆಕ್ಟರಿ ಆಫ್ ಓಪನ್ ಎಕ್ಸೆಸ್ ಜರ್ನಲ್ಸ್ ಸಂಸ್ಥೆಗೆ 138 ದೇಶಗಳ 8೯ ಭಾಷೆಗಳ ಪರ ಸಲಹಾ ಸಮಿತಿ ನಿರ್ದೇಶಕರಾಗಿ ರಬಕವಿ ಮೂಲದ ಸದ್ಯ ಕೇಂದ್ರೀಯ ವಿಶ್ವವಿದ್ಯಾನಿಲಯ ಹರಿಯಾಣದ ಮುಖ್ಯ ಗ್ರಂಥಪಾಲಕ ಡಾ. ಸಂತೋಷ ಚಂದ್ರಶೇಖರ ಹುಲಗಬಾಳಿ ಆಯ್ಕೆಯಾಗಿದ್ದಾರೆ.

ವಿಶ್ವಮಾನ್ಯತೆಯ ಸಂಸ್ಥೆಯ ನಿರ್ದೇಶಕರಾಗಿ ಆಯ್ಕೆಗೊಂಡ ಡಾ. ಸಂತೋಷ ಹುಲಗಬಾಳಿಗೆ ಹರಿಯಾಣ ವಿ. ವಿ. ಉಪಕುಲಪತಿ ತಂಕೇಶ್ವರ ಕುಮಾರ ಅಭಿನಂದಿಸಿದ್ದಾರೆ.

ರಬಕವಿಯ ಬಣಜಿಗ ಸಮಾಜದ ಅಧ್ಯಕ್ಷ ಗಿರೀಶ ಮುತ್ತೂರ, ಹಿರಿಯರು, ಶ್ರೀನಿಧಿ ಬ್ಯಾಂಕಿನ ನಿರ್ದೇಶಕ ಮಂಡಳಿ ರಬಕವಿ ನಗರದ ಕೀರ್ತಿ ಹೆಚ್ಚಿಸಿದ್ದಕ್ಕೆ ಅಭಿನಂದಿಸಿದ್ದಾರೆ. ಅವರ ಈ ಸಾಧನೆಗೆ ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಹಾರ್ದಿಕವಾಗಿ ಅಭಿನಂದನೆಗಳು.

## ಜಿಲ್ಲಾಡಳಿತದಿಂದ ಸಮಾಜವೀರ ಪತ್ರಿಕೆಯ ಸಂಪಾದಕ ಮುಜಫರ್ ಶಾಲಗಾರ ಅವರಿಗೆ ಸನ್ಮಾನ



**ಬಾಗಲಕೋಟೆ:** ಇಂದು ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಸ್ವಾತಂತ್ರ್ಯೋತ್ಸವ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮದಲ್ಲಿ ಉತ್ತಮ ಸೇವೆ ಸಲ್ಲಿಸಿದಕ್ಕಾಗಿ ಸಮಾಜವೀರ ಕನ್ನಡ ಪ್ರಾದೇಶಿಕ ದಿನ ಪತ್ರಿಕೆಯ ಸಂಪಾದಕ ಮುಜಫರ್ ಶಾಲಗಾರ ಇವರಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ಬಿ. ತಿಮ್ಮಾಪುರ ಅವರು ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ವಿಶ್ವವಾಣಿ ವರದಿಗಾರ ಅಭಿಷೇಕ ಪಾಟೀಲ ಅವರಿಗೆ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಹೆಚ್. ವಾಯ್. ಮೇಟಿ, ಲೋಕಸಭಾ ಸದಸ್ಯ ಪಿ.ಸಿ. ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್. ಪೂಜಾರ, ಹನುಮಂತ ನಿರಾಣಿ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕನ್ನವರ, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿಧರ ಕುರೇರ,
ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥ್ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆನಂದ ಧಲಭಂಜನ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ‘ಪಾರ್ಕ್’ ಅಭಿವೃದ್ಧಿಗೆ ಪೂರಕ ಸಸ್ಯಸಂತೆ

**ಕೊಪ್ಪಳ :** ಸ್ವಾತಂತ್ರ್ಯ ದಿನದ ಅಂಗವಾಗಿ ತೋಟಗಾರಿಕಾ ಇಲಾಖೆ ತನ್ನ ಕಚೇರಿ ಆವರಣದಲ್ಲಿ ಪ್ರತಿ ವರ್ಷ ಹಮ್ಮಿಕೊಳ್ಳುವ ಸಸ್ಯಸಂತೆ ಮತ್ತು ತೋಟಗಾರಿಕೆ ಅಭಿಯಾನ ಈ ಬಾರಿ ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ಸಿದ್ಧಗೊಳ್ಳುತ್ತಿರುವ ‘ತೋಟಗಾರಿಕಾ ತಂತ್ರಜ್ಞಾನ ಪಾರ್ಕ್’ ಬೆಳವಣಿಗೆಗೆ ಪೂರಕವಾಗಿ ಇರಲಿದೆ.

ತೋಟಗಾರಿಕಾ ಪಾರ್ಕ್ ಕನಕಗಿರಿ ತಾಲ್ಲೂಕಿನ ಸಿರವಾರದ ಬಳಿ ಮಂಜೂರಾಗಿ ಐದು ವರ್ಷಗಳೇ ಉರುಳಿದ್ದರೂ ಅನುಷ್ಠಾನಕ್ಕೆ ಕ್ರಮಗಳು ಆಗಿರಲಿಲ್ಲ. ಎರಡು ತಿಂಗಳ ಹಿಂದೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಅನುಮೋದನೆ ಲಭಿಸಿದ್ದು, 194.33 ಎಕರೆ ಜಮೀನಿನಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಡಿ ?83.79 ಕೋಟಿ ಅಂದಾಜು ವೆಚ್ಚದಲ್ಲಿ ತಂತ್ರಜ್ಞಾನ ಪಾರ್ಕ್ ಆರಂಭಿಸುವುದಾಗಿ ಸರ್ಕಾರ ತಿಳಿಸಿದೆ.



ಕಟ್ಟಡ ನಿರ್ಮಾಣ, ತೋಟಗಾರಿಕಾ ಕೃಷಿಗೆ ಅನುಕೂಲವಾಗುವ ವಾತಾವರಣವನ್ನು ಅಲ್ಲಿ ಸೃಷ್ಟಿಸಬೇಕಾಗಿದೆ.

ಅದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿಯೇ ಸಸಿಗಳು ಹಾಗೂ ತೋಟಗಾರಿಕಾ ಕ್ಷೇತ್ರಕ್ಕೆ ಅನುಕೂಲವಾಗುವಂತೆ ಸೌಲಭ್ಯಗಳನ್ನು ಕಲ್ಪಿಸಲು ಸಿದ್ಧತೆ ಮಾಡಿಕೊಳ್ಳಲು ಇಲಾಖೆ ಈಗಿನಿಂದಲೇ ತಯಾರಿ ಮಾಡಿಕೊಳ್ಳುತ್ತಿದೆ. ಆದ್ದರಿಂದ ಆ. 15ರಿಂದ 20ರ ತನಕ ನಡೆಯಲಿರುವ ಸಸ್ಯ ಸಂತೆಯಲ್ಲಿ ಆದಾಯ ತರುವ ಹೊಸ ಬೆಳೆಗಳ ಪರಿಚಯ, ಕಡಿಮೆ ಖರ್ಚು ಮಾಡಿ ಹೆಚ್ಚು ಆದಾಯ ತರುವ, ನಿಶ್ಚಿತ ಆದಾಯ ಒದಗಿಸುವ ಹಾಗೂ ಹೆಚ್ಚು ನಿರ್ವಹಣೆ ಖರ್ಚು ಮತ್ತು ಹೆಚ್ಚು ಆದಾಯ ತಂದುಕೊಡುವ ಕೊಡುವ ಮಾದರಿಯ ತೋಟಗಾರಿಕಾ ಕೃಷಿಗಳ ಪರಿಚಯ ಇರಲಿದೆ.

ಕೃಷಿ ಭೂಮಿ ಇಲ್ಲದವರಿಗೂ ಈ ಮೇಳದಲ್ಲಿ ಉಪಯುಕ್ತ ಸಲಹೆಗಳು ಮತ್ತು ಮಾದರಿಗಳ ಪರಿಚಯ ಇರಲಿದೆ. ಮನೆಯ ತಾರಸಿಯಲ್ಲಿ ತೋಟ, ಮನೆಯಂಗಳದಲ್ಲಿ ಅಲಂಕಾರಿಕ ಸಸ್ಯಗಳನ್ನು ಬೆಳೆಯುವುದು ಮತ್ತು ಮನೆಯ ಅಂದ ಹೆಚ್ಚಿಸುವಂತೆ ಮಾಡಲು ಸಸಿಗಳ ಮಾರಾಟ ಇರಲಿದೆ. ಕಂಪನಿಯವರೇ ‘ಮರಳಿ ಖರೀದಿಸು’ ವ್ಯವಸ್ಥೆಯಲ್ಲಿ ಫ್ಲೋರಿಜಾ ಕಂಪನಿ ಹಲಸು ಹಾಗೂ ಮೋಸಂಬಿ ಕೃಷಿಗೆ ಉತ್ತೇಜನ ನೀಡಲಿದ್ದಾರೆ.

ಶಿಮ್ಲಾದಲ್ಲಿ ವ್ಯಾಪಕವಾಗಿ ಬೆಳೆಯಲಾಗುವ ಅನ್ನಾ ಎನ್ನುವ ಸೇಬಿನ ತಳಿಯನ್ನು ಈ ಸಲ ಜಿಲ್ಲೆಯಲ್ಲಿಯೂ ಬೆಳೆಯಲಾಗುತ್ತಿದೆ. ಜೊತೆಗೆ ಕಡಿಮೆ ನಿರ್ವಹಣೆ ವೆಚ್ಚದೊಂದಿಗೆ ಉತ್ತಮ ಆದಾಯ ತಂದುಕೊಡುವ ಮತ್ತು ಮಿಶ್ರ ಬೆಳೆಯಾಗಿಯೂ ಬೆಳೆಯಬಹುದಾದ ಮಸಾಲೆ ಪದಾರ್ಥಗಳಾದ ಯಾಲಕ್ಕಿ, ಲವಂಗ ಹಾಗೂ ಮೆಣಸು ಬೆಳೆಗಳ ಉತ್ತೇಜನ ಲಭಿಸಲಿದೆ.

# ಮತ ಕಳವಿನಿಂದ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ: ರಮೇಶ ನಾಯಕ ಹುಲಿಹೈದರ



**ಕನಕಗಿರಿ :** ‘ಬಿಜೆಪಿ ಸರ್ಕಾರ ಯಾವ ಸಂದರ್ಭದಲ್ಲಿಯೂ ಕೂಡ ಸಂವಿಧಾನಬದ್ಧವಾಗಿ ನಡೆದುಕೊಂಡಿಲ್ಲ. ಮತ ಕಳ್ಳತನ ಮಾಡಿಯೇ ಬಿಜೆಪಿ ಮೂರು ಬಾರಿ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದೆ’ ಎಂದು ಪ್ರಚಾರ ಸಮಿತಿ ಅಧ್ಯಕ್ಷ ರಮೇಶ ನಾಯಕ ಹುಲಿಹೈದರ ಆರೋಪಿಸಿದರು.

ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಬಿಜೆಪಿಯ ಮತ ಕಳ್ಳತನ ವಿರೋಧಿಸಿ ಹಾಗೂ ಕಾಂಗ್ರೆಸ್ ವರಿಷ್ಠ ರಾಹುಲಗಾಂಧಿ ಬೆಂಬಲಿಸಿ ಗುರುವಾರ ರಾತ್ರಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ತಮ್ಮ ಅಧಿಕಾರದ ಆಸೆಗಾಗಿ ಬಿಜೆಪಿಯು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಗ್ಗೊಲೆ ಮಾಡಿದೆ. ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸಂವಿಧಾನ ವಿರೋಧಿ ಸರ್ಕಾರವಾಗಿದೆ. ಬಿಜೆಪಿಯವರಿಗೆ ಸಂವಿಧಾನದ ಮೇಲೆ ನಂಬಿಕೆ ಇದ್ದರೆ ಮತ ಪತ್ರದ ಮೂಲಕ ಚುನಾವಣೆ ಎದುರಿಸಲಿ’ ಎಂದು ಸವಾಲು ಹಾಕಿದರು.

ಕಾಂಗ್ರೆಸ್ ಉಪಾಧ್ಯಕ್ಷ ಸಿದ್ದಪ್ಪ ನೀರ್ಲೂಟಿ, ತಾ.ಪಂ. ಮಾಜಿ ಅಧ್ಯಕ್ಷ ಬಸಂತಗೌಡ ಪಾಟೀಲ, ಮುಖಂಡ ಚಂದ್ರೆಗೌಡ ಪೊಲೀಸ್ ಪಾಟೀಲ ಮಾತನಾಡಿದರು.

ಪ. ಪಂ. ಉಪಾಧ್ಯಕ್ಷ ಕಂಠಿರಂಗ ನಾಯಕ, ಸದಸ್ಯ ಅನಿಲಕುಮಾರ, ರಾಕೇಶ ಕಂಪ್ಲಿ, ನಾಮ ನಿರ್ದೇಶಕ ಶಾಂತಪ್ಪ ಬಸರಿಗಿಡದ, ಆಶ್ರಯ ಸಮಿತಿ ಸದಸ್ಯ ಕನಕಪ್ಪ ಮ್ಯಾಗಡೆ,, ಆರೋಗ್ಯ ರಕ್ಷಾ ಸಮಿತಿ ಸದಸ್ಯ ವೆಂಕೋಬ ಭೋವಿ, ಎನ್‌ಎಸ್‌ಯುಐ ಅಧ್ಯಕ್ಷ ಮಂಜುನಾಥ, ನಗರ ಘಟಕದ ಅಧ್ಯಕ್ಷ ರವಿ ಪಾಟೀಲ,

ಕೆಡಿಪಿ ಮಾಜಿ ಸದಸ್ಯ ನಾಗಪ್ಪ ಹುಗ್ಗಿ, ಪ್ರಮುಖರಾದ ನಾಗೇಶ ಬಡಿಗೇರ, ಖಾದರಬಾಷ ಇತರರು ಇದ್ದರು.

ಇದಕ್ಕೂ ಪೂರ್ವದಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಕಚೇರಿಯಿಂದ ಮೊಂಬತ್ತಿ ಬೆಳಕಿನಲ್ಲಿ ಪಾದಯಾತ್ರೆ ಮೂಲಕ ವಾಲ್ಮೀಕಿ ವೃತ್ತದವರೆಗೆ ಪ್ರತಿಭಟನೆ ನಡೆಸಿದರು.

# ಅಪಾಯ ಸ್ಥಿತಿಯ ಮನೆಗಳಲ್ಲೇ ಜನರ ವಾಸ

**ಕುಷ್ಟಗಿ :** ಕಳೆದ ಎರಡು ವಾರಗಳಿಂದ ನಿರಂತರವಾಗಿ ಸುರಿದ ಮಳೆಗೆ ತಾಲ್ಲೂಕಿನ ಶಿರಗುಂಪಿ ಗ್ರಾಮದಲ್ಲಿನ ಅನೇಕ ಮನೆಗಳ ತಳದಲ್ಲಿ ನೀರು ಜಿನುತ್ತಿರುವುದರಿಂದ ಮನೆಗಳು ಶಿಥಿಲಗೊಂಡಿದ್ದು ಕುಟುಂಬಗಳು ಅಪಾಯಕ್ಕೆ ಸಿಲುಕಿರುವುದು ಗೊತ್ತಾಗಿದೆ.

ಈ ಭಾಗದಲ್ಲಿ ಅತಿಯಾಗಿ ಮಳೆಯಾಗಿರುವುದು ಹಳ್ಳ,ಕೊಳ್ಳಗಳು ತುಂಬಿ ಹರಿದಿದ್ದು ಅಂತರ್ಜಲ ಹೆಚ್ಚಾಗಿದೆ. ಹಾಗಾಗಿ ತಗ್ಗುಪ್ರದೇಶದಲ್ಲಿರುವ ವಾಸಿಸುತ್ತಿರುವ ಐದಾರು ಕುಟುಂಬಗಳ ಮನೆಗಳ ತಳದಿಂದ ನೀರು ನಿರಂತರವಾಗಿ ಜಿನುಗುತ್ತಿದೆ.

ಮನೆಯವರು ನೀರನ್ನು ಮೋಟರ್‌ಪಂಪ್ ಮೂಲಕ ಹೊರಹಾಕುತ್ತಿದ್ದಾರೆ.

ಆದರೂ ಜಿನುಗುವಿಕೆ ಕಡಿಮೆಯಾಗಿಲ್ಲ.

ಮಣ್ಣಿನ ಮನೆಗಳಾಗಿದ್ದು ಗೋಡೆಗಳು ತೇವಗೊಂಡಿವೆ ಎಂದು ತಿಳಿಸಲಾಗಿದೆ.



ಮನೆಯಲ್ಲಿ ವೃದ್ಧರು, ಮಕ್ಕಳು ವಾಸಿಸುತ್ತಿದ್ದು ಕೂಡಲು, ಮಲಗುವುದಕ್ಕೂ ಸಾಧ್ಯವಾಗಿಲ್ಲ, ಸದಾ ತೇವಗೊಂಡ ಮನೆಯಲ್ಲಿಯೇ ಉಳಿದುಕೊಂಡಿದ್ದು ಬಹಳಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ.

ಈ ಕಾರಣಕ್ಕೆ ತಾತ್ಕಾಲಿಕವಾಗಿಯಾದರೂ ಪರ್ಯಾಯ ಪುನರ್ವಸತಿ ಕಲ್ಪಿಸುವಂತೆ ಗ್ರಾಮ ಪಂಚಾಯಿತಿ ಇತರೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಈ ಕುರಿತು ಆ.14 ರಂದು ಸಮಸ್ಯೆ ಸಿಲುಕಿರುವ ಕುಟುಂಬಗಳಿಗೆ ಸೇರಿದ ನಿರ್ಮಲಾ, ಗೀತಾ, ಹಂಪಮ್ಮ, ಹನುಮಂತಿ ಇತರರು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದಾರೆ.

ನಿಮ್ಮ ಜೀವಕ್ಕೆ ನೀವೇ ಜವಾಬ್ದಾರಿ; ನೋಟಿಸ್! ಪರ್ಯಾಯ ಪುನರ್ವಸತಿ ಕಲ್ಪಿಸುವಂತೆ ಮನವಿ ಮಾಡಿದ ಸಂತ್ರಸ್ತರಿಗೆ ಶಿರಗುಂಪಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆ.13 ರಂದು ನೋಟಿಸ್ ನೀಡಿದ್ದು ‘ನಿಮ್ಮ ಮನೆಗಳು ಶಿಥಿಲಗೊಂಡಿದ್ದು ಯಾವುದೇ ಸಮಯದಲ್ಲಿ ಬೀಳುವ ಸ್ಥಿತಿಯಲ್ಲಿವೆ.

ಹಾಗಾಗಿ ತಕ್ಷಣ ಸ್ಥಳಾಂತರಗೊಂಡು ಮಾರುತಿ ದೇವಸ್ಥಾನದ ಸಮುದಾಯ ಭವನದಲ್ಲಿ ವಾಸಿಸಬೇಕು.

ಒಂದು ವೇಳೆ ನೀವು ಮನೆಯಲ್ಲಿ ಯೇ ಉಳಿದುಕೊಂಡು ನಿಮ್ಮ ಜೀವಕ್ಕೆ ಹಾನಿಯಾದರೆ ನೀವೇ ಜವಾಬ್ದಾರರು’ ಎಂದು ನೋಟಿಸ್‌ನಲ್ಲಿ ಸ್ಪಷ್ಟಡಿಸಿದ್ದಾರೆ.

ನೋಟಿಸ್‌ನಿಂದ ಬೇಸರಗೊಂಡ ಸಂತ್ರಸ್ತರು ತಾವು ಐದಾರು ಕುಟುಂಬದವರಿದ್ದು ಒಂದೇ ಸ್ಥಳದಲ್ಲಿ ಇರಲು ಸಾಧ್ಯವಾಗುವುದಿಲ್ಲ.

ಹಾಗಾಗಿ ಮಳೆಗಾಲ ಮುಗಿಯುವವರೆಗೂ ತಗಡಿನ ಶೀಟ್‌ಗಳ ಶೆಡ್ ನಿರ್ಮಿಸಬೇಕು ಮತ್ತು ಅಗತ್ಯವಸ್ತುಗಳನ್ನು ನೀಡುವಂತೆ ಮನವಿ ಮಾಡಿದರೆ ಬೇಜವಾಬ್ದಾರಿಯಿಂದ ನೋಟಿಸ್ ನೀಡಿದ್ದಾರೆ ಎಂದು ತಹಶೀಲ್ದಾರರಿಗೆ ಸಲ್ಲಿಸಿದ ಮನವಿಯಲ್ಲಿ ಸಂತ್ರಸ್ತರು ಅಳಲು ತೋಡಿಕೊಂಡಿದ್ದಾರೆ.

# ಸಚಿವ ಡಾ. ಎಚ್ ಕೆ ಪಾಟೀಲರಿಂದ ಇಂದಿರಾ ಕ್ಯಾಂಟಿನ ಲೋಕಾರ್ಪಣೆ

**ಗದಗ :** ನಗರದ ಗಾನಯೋಗಿ ಪಂಡಿತ್ ಪುಟ್ಟರಾಜ ಗವಾಯಿ ಬಸ್ ನಿಲ್ದಾಣದಲ್ಲಿ ಆಗಸ್ಟ್ 15 ಶುಕ್ರವಾರದಂದು

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ಅವರು ನೂತನವಾಗಿ ನಿರ್ಮಿಸಲಾದ ಇಂದಿರಾ ಕ್ಯಾಂಟೀನ್ ಲೋಕಾರೆಣಗೊಳಿಸಿದರು.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅಕ್ಬರ್ಸಾಬ್ ಬಬರ್ಜಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ



ಮಂದಾಲಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್, ಅಪರ ಜಿಲ್ಲಾಧಿಕಾರಿ ಡಾ. ದುರುಗೇಶ್ ಕೆ.ಆರ್ ಸೇರಿದಂತೆ ಗದಗ ಬೆಟಗೇರಿ ನಗರ ಸಭೆ ಸದಸ್ಯರು ಉಪಸ್ಥಿತರಿದ್ದರು.

# ಅಕ್ಕ ಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯಕ್ಕೆ ಎಬಿವಿಪಿ ನಿಯೋಗ ಭೇಟಿ



**ವಿಜಯಪುರ :** ಇಲ್ಲಿನ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ವತಿಯಿಂದಕರ್ನಾಟಕರಾಜ್ಯಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ,ಎಬಿವಿಪಿ ನಿಯೋಗವು ಭೇಟಿ ನೀಡಿತು.

ವಿಶ್ವವಿದ್ಯಾಲಯಕ್ಕೆ ಬೇರೆ ಬೇರೆ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿನಿಯರಿಗೆ ಅವರ ಅಂಕ ಪಟ್ಟಿ ಹಾಗೂ ಅವರ ಶೈಕ್ಷಣಿಕ ಸಮಸ್ಯೆಗಳು ಒಂದೇ ದಿನದಲ್ಲಿ ಪರಿಹರಿಸಿ ಕೊಡಲು ವಿದ್ಯಾರ್ಥಿ ಪರಿಷತ್ ಆಗ್ರಹಿಸಿತು.

ವಿಶ್ವವಿದ್ಯಾಲಯ ಕುಲಪತಿ ಪ್ರೊ. ವಿಜಯಾ ಕೋರಿಶೆಟ್ಟಿ ಅವರಿಗೆ ಮನವಿ ಸಲ್ಲಿಸಲಾಯಿತು.

ಈಸಂದರ್ಭದಲ್ಲಿಎಬಿವಿಪಿರಾಜ್ಯವಿಶ್ವವಿದ್ಯಾಲಯಗಳ ಸಂಚಾಲಕ ವಿದ್ಯಾನಂದ ಸ್ಥಾವರಮಠ ಹಾಗೂ ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಪ್ರವೀಣ ಬಿರಾದಾರ ಅವರು ಉಪಸ್ಥಿತರಿದ್ದರು.

# ರಂಭಾಪುರದಲ್ಲಿ ಜೋಡು ಕುದುರೆ ಓಟದ ಸ್ಪರ್ಧೆ

**ವಿಜಯಪುರ :** ತಾಲೂಕಿನ ರಂಭಾಪುರ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ಉತ್ಸವದ ಪೂರ್ವಭಾವಿಯಾಗಿ ರೈತರಿಗಾಗಿ ಜೋಡು ಕುದುರೆ ಓಟದ ಸ್ಪರ್ಧೆ ಏರ್ಪಡಿಸಲಾಗಿತ್ತು.

ಸ್ಪರ್ಧೆಯಲ್ಲಿ ವಿಜೇತರಾದ ರೈತರಿಗೆ ಊರಿನ ಹಿರಿಯರು, ಯುವಕರು ಬಹುಮಾನಗಳನ್ನು ವಿತರಿಸಿದರು.

ಸಂಗನಗೌಡ ಪಾಟೀಲ, ಈರನಗೌಡ ಪಾಟೀಲ, ಧರೆಪ್ಪ ಪೂಜಾರಿ, ಶರಣು ಪೂಜಾರಿ, ಶ್ರೀಶೈಲ ಲೋಗಾವಿ, ಕೆಂಚಪ್ಪ ಲೋಗಾವಿ, ಸಂತೋಷ ಮೆಂಡೆಗಾರ, ರಾಮನಗೌಡ ಪಾಟೀಲ ಮುಂತಾದವರು



ಉಪಸ್ಥಿತರಿದ್ದರು

# ಹರ್ ಘರ್ ತಿರಂಗಾ: ಬೈಕ್ ರ್‍ಯಾಲಿ

**ಸಿಂದಗಿ :** ಸ್ವಾತಂತ್ರೋತ್ಸವದ ಅಂಗವಾಗಿ ಇಲ್ಲಿನ ಬಿಜೆಪಿ ಸಿಂದಗಿ ಮಂಡಲದ ಯುವ ಮೋರ್ಚಾ ವತಿಯಿಂದ ಹರ್ ಘರ್ ತಿರಂಗಾ ನಿಮಿತ್ಯ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೈಕ್ ರ್‍ಯಾಲಿ ನಡೆಯಿತು.

ಇಲ್ಲಿನ ಬಸವೇಶ್ವರ ವೃತ್ತದಲ್ಲಿ ಸಭೆ ಸೇರಿದ ಮುಖಂಡರು ಬಹಿರಂಗ ಸಭೆ ನಡೆಸಿ ನಂತರ ನೂರಾರು ಕಾರ್ಯಕರ್ತರೊಂದಿಗೆ ಬೈಕ್ ರ್‍ಯಾಲಿ ನಡೆಸಿದರು.

ಮಾಜಿ ಶಾಸಕ ರಮೇಶ ಭೂಸನೂರ, ಮಂಡಲ ಅಧ್ಯಕ್ಷ ಸಂತೋಷ ಪಾಟೀಲ, ಎಂ.ಎಸ್.ಮಠ, ಸಿದ್ದು ಬುಳ್ಳಾ, ಶ್ರೀಶೈಲಗೌಡ ಮಾಗಣಗೇರಿ, ಅಶೋಕ ನಾರಾಯಣಪೂರ, ಪ್ರಶಾಂತ ಕದ್ದರಕಿ, ಮಾಜಿ ಗ್ರಾ.ಪಂ.ಅಧ್ಯಕ್ಷ ಮಡಿವಾಳಪ್ಪಗೌಡ ಬಿರಾದಾರ, ಮಾಜಿ ತಾ.ಪಂ.ಸದಸ್ಯ ಶ್ರೀಶೈಲ ಚಳ್ಳಗಿ, ಮಲ್ಲು ಸಾವಳಸಂಗ, ಪೀರು ಕೆರೂರ, ವಿಠ್ಠಲ ನಾಯಿಕೋಡಿ,



ಮಾಜಿ ತಾ.ಪಂ.ಸದಸ್ಯ ಶಿವಯೋಗಿ ಮೂಡಗಿ, ಬಿ.ಎಚ್.ಬಿರಾದಾರ, ಚಂದ್ರಶೇಖರ ಅಮಲಿಹಾಳ, ಸಾಯಬಣ್ಣ ಪುರದಾಳ ಮತ್ತಿತರರು ನೇತ್ರತ್ವ ವಹಿಸಿದ್ದರು.

# ಇದ್ ಮೀಲಾದ್–ಗಣೇಶೋತ್ಸವ ಕುರಿತು ಶಾಂತಿ ಸಭೆ

**ತಾಳಿಕೋಟೆ :** ಮಹ್ಮದ ಪೈಗಂಬರ ಅವರ ಜನ್ಮದಿನದಂದು ಆಚರಿಸುತ್ತಾ ಸಾಗಿಬಂದಿರುವ ಮುಸ್ಲಿಂ ಬಾಂದವರ ಹಬ್ಬದಲ್ಲಿಹಾಗೂಗಣೇಶಉತ್ಸವಆಚರಿಸುವ ಕುರಿತು ಗಣೇಶ ಮಂಡಳಿಯವರು ಶಾಂತಿ ಮತ್ತು ಸೌಹಾರ್ದತೆ ಭಾವನೆಗಳಿಂದ ತಮ್ಮ ತಮ್ಮ ಈ ಹಬ್ಬಗಳನ್ನು ಆಚರಿಸಿ ಭಕ್ತಿ ಭಾವವೆಂಬುದನ್ನು ತೋರಿಸುವ ಕಾರ್ಯಮಾಡುತ್ತಾ ಸಾಗಬೇಕೆಂದು ಮುದ್ದೇಬಿಹಾಳ ಸಿಪಿಐ ಮಹ್ಮದಪಶು ಉದ್ದೀನ ಅವರು ಹೇಳಿದರು.

ಇದ್ ಮೀಲಾದ್ ಹಾಗೂ ಗಣೇಶ ಉತ್ಸವ ಹಬ್ಬಗಳ ಆಚರಣೆ ಕುರಿತು ಬುಧವಾರರಂದು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಕರೆಯಲಾದ ಶಾಂತಿ ಪಾಲನಾ ಸಭೆಯಲ್ಲಿ ಇದ್ ಮೀಲಾದ್ ಸಂಘಟಿಕರ, ಗಣೇಶಉತ್ಸವಮಂಡಳಿಯವರನ್ನುದೇಶಿಸಿ ಮಾತನಾಡುತ್ತಿದ್ದ ಅವರು ಈ ಆಚರಣೆ ಮಾಡುವವರಿಗೆ ಪೊಲೀಸ್ ಇಲಾಖೆ ಸಹಕಾರ, ಪುರಸಭೆ, ವಿದ್ಯುತ್ ಸಂಪರ್ಕಕ್ಕೆ ಅಧಿಕಾರಿಗಳನ್ನು ಇಂದು ತಮ್ಮ ನಧುರಿನಲ್ಲಿಯೇ ಕರೆಸಲಾಗಿದೆ ಸಂಬಂದಿತರಿಗೆ ತಮ್ಮದೇ ಆದಂತಹ ಈ ಹಬ್ಬದ ಹಾಗೂ ನಡೆಯುವಂತಹ ಆಯಾ ಬಡಾವಣೆಗಳ ಕಾರ್ಯ ಚಟುವಟಿಕೆಗಳನ್ನು ತಿಳಿಸಿ ಅವರಿಂದಲೂ ಪರವಾನಿಗೆ ಪಡೆಯುವ ಕಾರ್ಯ ಮಾಡಬೇಕೆಂದರು. ತಮಗೆ ಪರವಾನಿಗೆ



ನೀಡುವ ಸಮಯದಲ್ಲಿ ಯಾವುದೇ ಆತಂಕ ಆಗದಂತೆ ಈ ಸಂಬಂದಿಸಿದವರಿಗೆ ತಿಳಿಸಲಾಗಿದೆ ನಿಗಧಿತ ಸ್ಥಳವನ್ನಾಗಲಿ, ನಿಗಧಿತ ಬಡಾವಣೆಗಳಲ್ಲಾಗಲಿ ಯಾರಿಗೂ ಆತಂಕವಾಗದಂತಹ ಸ್ಥಿತಿಯನ್ನು ಗುರುತಿಸಿಕೊಂಡು ವಿದ್ಯುತ್ ಸರಬರಾಜು ಮಾಡಿಕೊಳ್ಳಬೇಕೆಂದರು. ಈ ಎಲ್ಲಾ ವ್ಯವಸ್ಥೆಗೆ ಪರವಾನಿಗೆ ಎಂಬುದು ಕಡ್ಡಾಯವಾಗಿದೆ ಎಲ್ಲರೂ ಈ ಕಡ್ಡಾಯವಾದಂತಹ ನಿಯಮಗಳನ್ನು ಪಾಲನೆ ಮಾಡಬೇಕೆಂದರು. ಗಣೇಶ ವಿಸರ್ಜನೆಗಾಗಿ ಪುರಸಭೆಯವರು ವ್ಯವಸ್ಥಿತವಾಗಿ ವ್ಯವಸ್ಥೆ ಮಾಡಿಕೊಳ್ಳಲು ಸಜ್ಜಾಗಿದ್ದಾರೆ ಅದರಂತೆ ವಿದ್ಯುತ್ ಸರಬರಾಜುಕೂಡಾದೊರೆಯಲಿದೆಒಟ್ಟಿನಲ್ಲಿ ಶಾಂತತೆಯಿಂದ ಗಣೇಶ ಮಂಡಳಿಯವರು ಗಣೇಶ ಹಬ್ಬವನ್ನು ಆಚರಿಸಿ ಆಚರಿಸುವ ಸಮಯದಲ್ಲಿ ಸೌಂಡ್‌ನ್ನು ಇತಿಮಿತಿಗೆ ತಕ್ಕಂತೆ ಇಟ್ಟು ಅನ್ಯರಿಗೂ ತೊಂದರೆಯಾಗದಂತೆ ನೋಡಿಕೊಳ್ಳುವ ಕಾರ್ಯ ಮಾಡಬೇಕೆಂದರು. ಕಾನೂನು ವಿರೋಧಿಸುವಂತಹ ಯಾವುದೇ ರೀತಿಯ ಅವಘಡಕ್ಕೆ ಪೊಲೀಸ್ ಇಲಾಖೆ ಕೊಡುವದಿಲ್ಲಾ ತಾವು ಹಚ್ಚುತ್ತಿರುವ ಡಿಜೆ ಸಮಯದಲ್ಲಿ ಯಾವುದೇ ತೊಂದರೆಯಾದಲ್ಲಿತಿಳಿಸಿಮಂಡಳಿಯವರು ನಿಮ್ಮವರೆ ಆದಂತಹ ಸ್ವಯಂ ಸೇವಕರನ್ನು ನೇಮಿಸಿಕೊಂಡು ನಿಮ್ಮ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದರು. ಮುಖ್ಯವಾಗಿ ಸಿಸಿ ಟಿವಿಗಳನ್ನು ಅಳವಡಿಸಿಕೊಂಡರೆ ಅನುಕೂಲವಾಗಲಿದೆ ಎಂದರು.

ಇನ್ಸ್ಪೇರ್ವ ಪಿಎಸ್‌ಐ ಶ್ರೀಮತಿ ಜ್ಯೋತಿ ಖೋತ್ ಅವರು ಮಾತನಾಡಿ 1893ರಲ್ಲಿ ಬಾಲಗಂಗಾಧರ ತಿಲಕರು ಗಣೇಶ ಉತ್ಸವದ ಆಚರಣೆಯನ್ನು ಹೊರ ತಂದಿದ್ದಾರೆ ಅದರಂತೆ ಪ್ರವಾದಿ ಮಹ್ಮದರ ಜನ್ಮದಿನದ ಅಂಗವಾಗಿ ಮುಸ್ಲಿಂ ಬಾಂದವರಿಂದ ಇದ್ ಮೀಲಾದ್ ಆಚರಣೆ ಮಾಡಲಾಗುತ್ತಿದೆ ಈ ಎರಡೂ ಕಾರ್ಯಗಳು ದೇವರ ಕಾರ್ಯಗಳಾಗಿದ್ದು ಈ ಕಾರ್ಯಗಳಲ್ಲಿ ಭಕ್ತಿಭಾವದೆಂಬುದಿರಲಿ ಗಣೇಶ ಮಂಡಳಿಯವರು ಸ್ವಯಂ ಸೇವಕರನ್ನು ನೇಮಕ ಮಾಡಿಕೊಂಡು ಬಡಾವಣೆಯಲ್ಲಿ ಯಾವುದೇ ತರಹದ ಆತಂಕವಾಗದಂತೆ ನೋಡಿಕೊಳ್ಳಬೇಕು ಅಂತಹ ಯಾವುದೇ ತರಹದ ಆತಂಕ ಸೃಷ್ಠಿಯಾದಲ್ಲಿ ನಮ್ಮ ಠಾಣೆಗೆ ತಿಳಿಸಿ ಎಂದು ಸೂಚಿಸಿದ ಅವರು ಒಟ್ಟಿನಲ್ಲಿ ಈ ಎರಡೂ ಹಬ್ಬಗಳನ್ನು ಶಾಂತರೀತಿಯಿಂದ ಆಚರಿಸುವ ಕಾರ್ಯ ಮಾಡಬೇಕು.

ಅಪರಾದ ವಿಭಾಗದ ಪಿಎಸ್‌ಐ ಆರ್. ಎಸ್.ಭಂಗಿ ಅವರು ಮಾತನಾಡಿ ನಮ್ಮ ಇಲಾಖೆ ಸೂಚಿಸಿದಂತೆ ವಿಸರ್ಜನಾ ದಿನದಂದು ಗಣೇಶ ಉತ್ಸವ ಮಂಡಳಿಯವರು

ಎದರು ಬದರು ಗಣೇಶ ಮೂರ್ತಿಗಳ ವಿಸರ್ಜನೆಗೆ ಮುಂದಾದಲ್ಲಿ ಸ್ವಲ್ಪ ಅಡಚಣೆ ಆಗಲಿದೆ ಹೋದ ವರ್ಷ ಹಾಗಾಗಿತ್ತು ಕಾರಣ ಆ ಸಂಬಂದಿತ ಬಡಾವಣೆಯ ಗಣೇಶ ಉತ್ಸವ ಮಂಡಳಿಯವರು ಸಮಯದ ಬದಲಾವಣೆ ಮಾಡಿಕೊಂಡು ವಿಸರ್ಜನೆಗೆ ಮುಂದಾದಲ್ಲಿ ಯಾವುದೇ ತರಹದ ಗದ್ದಲ ಮಯ ವಾತಾವರಣ ನಿರ್ಮಾಣವಾಗುವದಿಲ್ಲಾವೆಂದರು.

ಈ ಸಮಯದಲ್ಲಿ ಪ್ರಭುಗೌಡ ಮದರಕಲ್ಲ, ಜೈಭೀಮ ಮುತ್ತಗಿ, ಇಬ್ರಾಹಿಂ ಮನ್ಸೂರ, ಮೊದಲಾದವರು ಮಾತನಾಡಿದರು.

ಹೆಸ್ಕಾಂ ಅಧಿಕಾರಿ ವಿಜಯಕುಮಾರ ಬಿರಾದಾರ, ಅಗ್ನಿ ಶಾಮಕ ಠಾಣೆಯ ಮಹಾಂತೇಶ ಬಿರಾದಾರ, ಮುಖ್ಯಾಧಿಕಾರಿ ವಸಂತ ಪವಾರ, ಉಪಸ್ಥಿತರಿದ್ದರು.

ಈ ಸಮಯದಲ್ಲಿ ಇದ್ ಮೀಲಾದ ಆಚರಣೆಯ ಸಂಘಟಿತ ಪದಾಧಿಕಾರಿಗಳು, ಗಣೇಶ ಉತ್ಸವ ಮಂಡಳಿಯವರು, ಹಾಗೂ ಗಣ್ಯಮಾನ್ಯರು ಉಪಸ್ಥಿತರಿದ್ದರು.

# ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಿಗೆ ಮೂಲಭೂತ ಸೌಕರ್ಯ, ನೂತನ ಕಟ್ಟಡ ಮಂಜೂರಿಗೆ ಆಗ್ರಹಿಸಿ ಡಿ.ವಿ.ಪಿ ಮನವಿ

**ವಿಜಯಪುರ :** ನಗರದ ಗಾಂಧಿ ಚೌಕ್ ನಲ್ಲಿರುವ ಶಿಕ್ಷಣ ಇಲಾಖೆಯ ಮಹಿಳಾ ಶಾಲಾ ಕಾಲೇಜು ಕ್ಯಾಂಪಸ್ ನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಮೂಲಭೂತ ಸೌಕರ್ಯ ಮತ್ತು ನೂತನ ಕಟ್ಟಡ ಮಂಜೂರು ಮಾಡಬೇಕೆಂದು ದಲಿತ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ದಲಿತವಿದ್ಯಾರ್ಥಿಪರಿಷತ್‌ಜಿಲ್ಲಾಸಂಚಾಲಕ ಅಕ್ಷಯಕುಮಾರ ಅಜಮನಿ ಅವರು ಮಾತನಾಡಿ, ಗಾಂಧಿ ಚೌಕ್ ಕ್ಯಾಂಪಸ್ ನಲ್ಲಿ ಇರುವ ಮಹಿಳಾ ಶಾಲಾ ಕಾಲೇಜು ಐತಿಹಾಸಿಕ ಹಿನ್ನಲೆವುಳ್ಳದ್ದಾಗಿದೆ. ಬ್ರಿಟಿಷರ ಕಾಲದಿಂದಲ್ಲಿ ಪ್ರಾರಂಭವಾದ ಈ ಕಾಲೇಜು ಇದು ಮಹಿಳೆಯರಿಗಾಗಿಯೇ ಇರುವುದು ವಿಶೇಷ. ಇಲ್ಲಿ ಒಂದನೇ ತರಗತಿ ಯಿಂದ ಹಿಡಿದು ಪದವಿ ವಿದ್ಯಾರ್ಥಿಗಳ ವರೆಗೂ ಕಲಿತಕ್ಕಂತ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಆದರೆ ಈ ಕ್ಯಾಂಪಸ್ ದುರ್ದೈವ ಏನೆಂದರೆ



ಹಳೆ ಕಾಲದ ಕಟ್ಟಡಗಳೆ ಇನ್ನು ಇವೆ..ಬೇರೆ ಬೇರೆ ಹಳ್ಳಿಗಳಿಂದ ಓದಲು ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಬರುತ್ತಿದ್ದಾರೆ ಎಂದರು.

ಕಲಿಯಲು ಬರುವ ವಿದ್ಯಾರ್ಥಿಗಳಿಗನುಗುಣವಾಗಿ ಕಟ್ಟಡಗಳು, ಕೋಣೆಗಳು, ಗ್ರಂಥಾಲಯ, ಮಹಿಳಾ ವಿಶೇಷ ಕೋಣೆಗಳು, ಗಣಕಯಂತ್ರದ ಕೊಠಡಿಗಳು, ವಿವಿಧ ತರಬೇತಿಗಳ ವ್ಯವಸ್ಥೆಗಳನ್ನು ಇಲ್ಲಿಯವರೆಗೆ ನೀಡದೆ ಇರುವುದು ವಿಪರ್ಯಾಸ. ಇಲ್ಲಿ ಜನಪ್ರತಿನಿದಿಗಳುನಿಷ್ಕಾಳಜಿತೋರಿರುವುದು ಅರ್ಥವಾಗುತ್ತಿಲ್ಲ ಎಂದರು.

ಸ್ವತಂತ್ರ ಸಿಕ್ಕು ಇಂದಿಗೆ 76 ವರ್ಷಗಳು ಕಳೆದಿವೆ. ಆದರೂ ಒಂದು ಕ್ಯಾಂಪಸ್ ಅಭಿವೃದ್ಧಿ ಮಾಡಲು ಇಲ್ಲಿಯ ಜನ ಪ್ರತಿನಿಧಿಗಳಿಗೆ ಆಗುತ್ತಿಲ್ಲ ಎನ್ನುವುದನ್ನು ನೋಡಿದರೆ ವಿದ್ಯಾರ್ಥಿಗಳ ಮೇಲಿರುವ ನಿಷ್ಕಾಳಜಿ ಎದ್ದು ಕಾಣುತ್ತದೆ ಎಂದು ಹೇಳಿದರು.

ವಿದ್ಯಾರ್ಥಿನಿಯರ ಅಭಿವೃದ್ಧಿಯ ವಿಚಾರವನ್ನು ಗಮನದಲ್ಲಿ ಇಟ್ಟುಕೊಂಡು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಜವಾಬ್ದಾರಿ ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕು. ಇಲ್ಲವಾದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ಹೋರಾಟ ಮಾಡಲು ಕರೆ ಕೊಡುತ್ತೇಂದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂದೇಶ ಕುರಿ, ಯಮನೂರಿ ಮಾದರ, ಯಾಶೀನ್ ಇನಾಮದಾರ, ವೀರೇಶ ಕೊಪ್ಪಳ, ಪ್ರತಾಪ, ಸೌಮ್ಯ, ವಿಜಯಲಕ್ಷ್ಮಿ ಮುಂತಾದ ವಿದ್ಯಾರ್ಥಿನಿಯರು ಭಾಗಿಯಾಗಿದ್ದರು.

# ಆಲಮಟ್ಟಿ ಎತ್ತರ ಹೆಚ್ಚಿಸಲು ಕೇಂದ್ರ ಅಧಿಸೂಚನೆ ಹೊರಡಿಸಲಿ: ಅರವಿಂದ ಕುಲಕರ್ಣಿ

**ಸಿಂದಗಿ :** ನ್ಯಾಯಮೂರ್ತಿ ಬ್ರಿಜೇಶಕುಮಾರ ನೇತೃತ್ವದ 3ನೇ ನ್ಯಾಯಾಧೀಕರಣ ತೀರ್ಪಿನಂತೆ ಆಲಮಟ್ಟಿ ಲಾಲಬಹಾದ್ದೂರ ಶಾಸ್ತ್ರೀ ಜಲಾಶಯದ ಎತ್ತರವನ್ನು 519.60 ರಿಂದ 524.256 ಮೀಟರ್‌ಗೆ ಹೆಚ್ಚಿಸಿ ನೀರು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಈ ದಿಸೆಯಲ್ಲಿ ಕೇಂದ್ರ ಸರ್ಕಾರ ಕೂಡಲೇ ಅಧಿಸೂಚನೆ ಹೊರಡಿಸಬೇಕು ಎಂದು ಅಖಂಡ ಕರ್ನಾಟಕ ರೈತ ಸಂಘ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಆಗ್ರಹಿಸಿದರು.



ಪಟ್ಟಣದಲ್ಲಿ ಗುರುವಾರ ಸುದ್ದಿಗಾರರ ಜೊತೆಗೆ ಮಾತನಾಡಿ, 2010ರಲ್ಲಿ ನೀಡಿದ ತೀರ್ಪನ್ನು 2013ರಲ್ಲಿ ಸ್ಪಷ್ಟಿಕರಣ ತೀರ್ಪು ನೀಡಿದೆ. ಇಷ್ಟು ವರ್ಷಗಳಾದರೂ ಜಲಾಶಯದ ಎತ್ತರ ಹೆಚ್ಚಿಸಲು ಸರ್ಕಾರ ಕ್ರಮ ಜರುಗಿಸಿಲ್ಲ. ಸಾಂಗ್ಲಿ, ಮಿರಜ, ಕೊಲ್ಹಾಪುರಗಳಲ್ಲಿ ಪ್ರವಾಹ ಉಂಟಾಗುತ್ತದೆ ಎಂಬ ಮಹಾರಾಷ್ಟ್ರದ ನೆಪವನ್ನು ಮುಂದಿಟ್ಟುಕೊಂಡು ಕಾಲಹರಣ ಮಾಡಲಾಗುತ್ತಿದೆ. ಹಿನ್ನಿರಿನಿಂದ ಪ್ರವಾಹ ಬರುವುದಿಲ್ಲ ಎಂದು 2019ರಲ್ಲಿ ನಂದಕುಮಾರ ವರದಿ ನೀಡಿದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದತ್ತ ಬೆರಳು ಮಾಡುತ್ತದೆ. ರಾಜಕೀಯ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತದೆ ಎಂದು ಟೀಕಿಸಿದರು.

4-5ವರ್ಷಗಳಹಿಂದೆಜಲಾಶಯದಎತ್ತರಕ್ಕೆತಗಲುವ ವೆಚ್ಚ 75 ಸಾವಿರ ಕೋಟಿ ರೂಪಾಯಿ ಅಂದಾಜು ಮಾಡಲಾಗಿತ್ತು. ಈಗ ಅದು 1ಲಕ್ಷ ಕೋಟಿ ರೂಪಾಯಿ ದಾಟಿದೆ. ಹೀಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ ಕೇಂದ್ರ ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಂಡು ಯೋಜನೆ ಪೂರ್ಣಗೊಳಿಸಬೇಕು. ಹೀಗಾಗಿ ಕೂಡಲೇ ಪ್ರಧಾನಿ ನರೇಂದ್ರ ಮೋದಿ ಮಧ್ಯಸ್ಥಿಕೆ ವಹಿಸಬೇಕು ಎಂದು ಒತ್ತಾಯಿಸಿದರು.

ಜಲಾಶಯ ನಿರ್ಮಾಣಕ್ಕಾಗಿ ಅವಳಿ ಜಿಲ್ಲೆಗಳಾದ ವಿಜಯಪುರ-ಬಾಗಲಕೋಟೆಯ ರೈತರು ತಮ್ಮ ಅಲ್ಪಸ್ವಲ್ಪ ಜಮೀನುಗಳನ್ನು ತ್ಯಾಗ ಮಾಡಿದ್ದಾರೆ. ಬಂದ ಬಿಡಿಗಾಸು ಖಾಲಿಯಾಗಿ ನೆರೆಯ ರಾಜ್ಯಗಳಿಗೆ ಗುಳೆ ಹೋಗುವಂಥ ದುರಂತ ಎದುರಾಗಿದೆ. ಕಲಬುರಗಿ ಒಳಗೊಂಡಂತೆ ಆರು ಜಿಲ್ಲೆಗಳಿಗೆ ಈ ಜಲಾಶಯದ ನೀರು ಹರಿದು ಹೋಗುತ್ತದೆ. ಈ ಆರು ಜಿಲ್ಲೆಗಳ ತ್ಯಾಗ ಏನಿದೆ ಎಂದು ಅರವಿಂದ ಪ್ರಶ್ನಿಸಿದರು.

ಎತ್ತರ ಹೆಚ್ಚಾದರೆ 80 ಟಿ.ಎಂ.ಸಿ ನೀರು ವಿಜಯಪುರ-ಬಾಗಲಕೋಟೆ ನೀರಾವರಿ ಯೋಜನೆಗಳಿಗೆ ದೊರಕಲಿದೆ. ಸಂತ್ರಸ್ಥರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರಗಳು ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕು. ರೈತ ಮುಖಂಡ ಗುರುರಾಜ ಪಡಶೆಟ್ಟಿ ಮಾತನಾಡಿದರು.

# ದೇಶ ನಮಗೇನು ಕೊಟ್ಟಿದೆ ಅನ್ನುವುದಕ್ಕಿಂತ ದೇಶಕ್ಕಾಗಿ ನಾವೇನು ಮಾಡಿದೆವು ಮುಖ್ಯ : ಶಾಸಕ ಯಶವಂತರಾಯಗೌಡ ಪಾಟೀಲ

**ಇಂಡಿ :** ದೇಶ ನಮಗೇನು ಕೊಟ್ಟಿದೆ ಅನುದಕ್ಕಿಂತ ದೇಶಕ್ಕಾಗಿ ನಾವೇನುಮಾಡಿದ್ದೇವೆ ಎಂಬುದ ಸ್ಮರಿಸಬೇಕು. ಪ್ರಪಂಚದಲ್ಲೇ ಅತ್ಯಂತ ಹೆಚ್ಚು 140ಕೊಟಿ ಜನಸಂಖ್ಯೆ ಹೊಂದಿರುವ ರಾಷ್ಟ್ರ ನಮ್ಮದಾಗಿದೆ ಎಂದು ಶಾಸಕ ಯಶವಂತರಯ್ ಗೌಡ ಪಾಟೀಲ ಹೇಳಿದರು ನಗರದ ತಾಲೂಕ ಕ್ರೀಡಾಂಗಣದಲ್ಲಿ ಆಯೋಜಿಸಿದ 79ನೇ ಸ್ವಾತಂತ್ರ್ಯ ದಿನಾಚರಣೆ ಯ ಕಾರ್ಯಕ್ರಮ ದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿ ಫೋಟೋ ಪೂಜೆ ನೆರವೇರಿಸಿ ಮಾತನಾಡಿದರು. ಅವರು ಕಾರ್ಮಿಕ ಇಲಾಖೆ ಯಿಂದ ಕಾರ್ಮಿಕದ ಮಕ್ಕಳ ವಿದ್ಯಾಅಭ್ಯಾಸಕ್ಕೆ 34ಸಾವಿರ ಕೋಟಿ ರೂಗಳು ಅನುದಾನ ನೀಡಿದ




ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ಅಭಿನಂದಿಸಬೇಕಾಗುತ್ತದೆ ಎಂದು ಹೇಳಿದರು. ಇದೆಸಂದರ್ಭದಲ್ಲಿ ಮುಖ್ಯ ಮಂತ್ರಿ ಪದಕ ಪುರಸ್ಕಾರ ರಾದ ಡಿ ವೈ ಎಸ್ ಪಿ ಜಗದೇಶ್ ಅವರಿಗೆ ಶಾಸಕ ಕರಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮ ದ ವೇದಿಕೆಯಲ್ಲಿ ಉಪಸ್ಥಿತರಾದ ಶಾಸಕ ಯಶವಂತರಾಯ ಗೌಡ ಪಾಟೀಲ,ಆಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಡಾ,ಬಿ ಎಸ್ ಕನ್ನೂರ್,ತಹಶೀಲ್ದಾರ್ ಬಿ ಎಸ್ ಕಡಕಭಾವಿ, ಡಿ ವೈ ಎಸ್ ಪಿ ಜಗದೇಶ್, ಕಂದಾಯಉಪವಿಭಾಗಾಧಿಕಾರಿಅನುರಾಧ ವಸ್ತ್ರದ್, ಪುರಸಭೆ ಅಧ್ಯಕ್ಷ ನಿಂಬಾಜಿ ರಾಠೋಡ್,ಪುರಸಭೆ ಮುಖ್ಯಧಿಕಾರಿ ಕಟ್ಟಿಮನಿ, ಪಂಚ ಗ್ಯಾರಂಟಿ ಜಿಲ್ಲಾ ಅಧ್ಯಕ್ಷ ಇಲಿಯಾಸ್ ಭೋರಾಮಣಿ, ಪಂಚ್ ಗ್ಯಾರಂಟಿ ತಾಲೂಕ ಅಧ್ಯಕ ಪ್ರಶಾಂತ್ ಕಾಳೆ, ಬಿ ಇ ಓ ಇನಾಮದರ್ ಸೇರಿದಂತೆ ಹಲವಾರು ಗಣ್ಯರು ಭಾಗಿಯಾಗಿದರು.

# ಹೊಸೂರ ಸೇತುವೆಯಲ್ಲಿ ಬೃಹತ್ ಗುಂಡಿ; ವಾಹನ ಸಂಚಾರಕ್ಕೆ ತೀವ್ರ ಸಮಸ್ಯೆ

**ದೇವರಹಿಪ್ಪರಗಿ :** ಪಟ್ಟಣದ ಹೊಸೂರ ಸೇತುವೆಯಲ್ಲಿ ಬೃಹತ್ ಗುಂಡಿ ಹಾಗೂ ರಸ್ತೆ ಹದಗೆಟ್ಟಿದ್ದು ಸಾರ್ವಜನಿಕರು ಸಂಚಾರಕ್ಕೆ ಪರದಾಡುವಸ್ಥಿತಿನಿರ್ಮಾಣವಾಗಿದೆ ಸಂಬಂಧಪಟ್ಟ ಅಧಿಕಾರಿಗಳು ಸರಿಪಡಿಸಲು ಸಾರ್ವಜನಿಕರು ಆಗ್ರಹಿಸಿದ್ದಾರೆ.ಪಟ್ಟಣದ ಹೊಸೂರ ಸೇರಿದಂತೆ ಹಲವು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ಮೇಲೆ ದೊಡ್ಡ ಗುಂಡಿಗಳು ನಿರ್ಮಾಣವಾಗಿವೆ.



ಸಂಚಾರದ ವೇಳೆ ವಾಹನ ಸವಾರರು ಸೇತುವೆ ಮೇಲಿನ ಗುಂಡಿ ತಪ್ಪಿಸಲು ಹೋಗಿ ಅಪಘಾತಗಳು ಸಂಭವಿಸುತ್ತಿವೆ. ಹಲವರು ಅಪಘಾತದಲ್ಲಿ ಗಾಯಗೊಂಡಿದ್ದಾರೆ.ಈಗ ಮಳೆ ಸುರಿಯುತ್ತಿರುವುದರಿಂದ ರಸ್ತೆ ಗುಂಡಿಯಲ್ಲಿ ನೀರು ನಿಂತು ಇನ್ನಷ್ಟು ಸಮಸ್ಯೆಯಾಗಿದೆ.ವಿಜಯಪುರ-ಕಲಬುರ್ಗಿ ರಾ.ಹೇ-50ರಿಂದ ಪಟ್ಟಣದ ಮೂಲಕ ತಾಳಿಕೋಟಿ ಹಾಗೂ ಬಾಗೇವಾಡಿ ತಾಲ್ಲೂಕಿನ ನಾನಾ ಭಾಗಗಳಿಂದ ಸಾಕಷ್ಟು ರೈತರು, ವ್ಯಾಪಾರಿಗಳು ಆಗಮಿಸುತ್ತಾರೆ.

ಹೀಗಾಗಿ ಪ್ರತಿದಿನ ನೂರಕ್ಕೂ ಹೆಚ್ಚು ಲಾರಿ, ಟ್ರ್ಯಾಕ್ಟರ್‌ಗಳು ಇಲ್ಲಿ ಸಂಚಾರ ಮಾಡುತ್ತವೆ.

ಹೆಚ್ಚಿನ ವಾಹನಗಳೂ ಈ ಮಾರ್ಗದಲ್ಲೆ? ಸಂಚರಿಸುತ್ತವೆ.

ಸೇತುವೆಯ ದುರಸ್ತಿಗೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು, ಜನಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ವೃಂದ, ನೇಮಕಾತಿ ನಿಯಮ ಬದಲಾವಣೆಗೆ ಜಿಲ್ಲಾಧಿಕಾರಿಗೆ ಮನವಿ

**ವಿಜಯಪುರ :** ಪ್ರಾಥಮಿಕ ಶಾಲಾ ಶಿಕ್ಷಕರ 'ವೃಂದ ಮತ್ತು ನೇಮಕಾತಿ ನಿಯಮ' ಬದಲಾಯಿಸಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಗಿರುವ ಅನ್ಯಾಯ ಸರಿಪಡಿಸಿ, ನ್ಯಾಯಯುತ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕರಾಜ್ಯಪ್ರಾಥಮಿಕಶಾಲಾ ಶಿಕ್ಷಕರ ಸಂಘದ ವತಿಯಿಂದ ಮಂಗಳವಾರಅಪರಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.



ಮನವಿ ಸಲ್ಲಿಸಿ ಮಾತನಾಡಿದ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಅರ್ಜುನ ಲಮಾಣಿ ಪ್ರಾಥಮಿಕ ಶಾಲಾ ಶಿಕ್ಷಕರ 'ವೃಂದ ಮತ್ತು ನೇಮಕಾತಿ ನಿಯಮ' ಬದಲಾಯಿಸಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆಆಗಿರುವಅನ್ಯಾಯವನ್ನು ಸರಿಪಡಿಸಿ, ನ್ಯಾಯಯುತ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಒತ್ತಾಯಿಸಿದರೂ ಪ್ರಯೋಜನವಾಗಿಲ್ಲ.

ಹಲವಾರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನ್ಯಾಯವಾಗುತ್ತಿದ್ದು, ಕಳೆದ ವರ್ಷ ಮುಖ್ಯಮಂತ್ರಿಗಳು ಒಂದು ತಿಂಗಳಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದೆಂದು ಭರವಸೆ ನೀಡಿದ್ದರು.

ಆದರೂ ಸಾಧ್ಯವಾಗಿಲ್ಲ, ಮುಂಬರುವ ದಿನಗಳಲ್ಲಿ ನಮ್ಮ ಬೇಡಿಕೆ ಈಡೇರುವವರೆಗೆ ಪ್ರತಿಭಟನೆ ನಡೆಸಲಾಗುವುದು. ಸಾಧ್ಯವಾದರೆ ತರಗತಿ ಬಹಿಷ್ಕಾರ ಮಾಡಿಯೂ ನಮ್ಮ ಬೇಡಿಕೆ ಈಡೇರಿಕೆಗೆ ಆಗ್ರಹಿಸಲಾಗುವುದು. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಮಾತಿನಂತೆ ತಕ್ಷಣವೇ ನಮ್ಮ ಬೇಡಿಕಗೆ ಸ್ಪಂದಿಸಬೇಕೆಂದು ಆಗ್ರಹಿಸಿದರು.

ಜಿಓಸಿಸಿ ಬ್ಯಾಂಕಿನ ನಿರ್ದೇಶಕ ಹಣಮಂತ ಕೊಣದಿ, ಸೈಯ್ಯದಜುಬೇರ ಕೆರೂರ ಮಾತನಾಡಿ, ಸರ್ಕಾರ ಶಿಕ್ಷಕರ ಬೇಡಿಕೆ ಈಡೇರಿಕೆಗೆ ಮೀನಮೇಷ ಎಣಿಸುತ್ತಿದೆ. 2016ಕ್ಕಿಂತ ಮುಂಚೆ ನೇಮಕವಾದವರಿಗೆ ಅನ್ಯಾಯ ಮಾಡುತ್ತಿದೆ.

ತಕ್ಷಣವೇ ನಮ್ಮ ಸಮಸ್ಯೆಗೆ ಸ್ಪಂದಿಸಿ ಸಹಕರಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಶಿಕ್ಷಕರ ಸಂಘದ ಪ್ರಧಾನಕಾರ್ಯದರ್ಶಿ ಅಲ್ಲಾಬಕ್ಷ ವಾಲೀಕಾರ, ಶಿಕ್ಷಕರ ಸಂಘಟನೆ ಪ್ರಮುಖರಾದ ಮಲಕಪ್ಪ ಟಕ್ಕಳಕಿ, ನಿರ್ದೇಶಕರಾದ ಅಶೋಕ ಚನಬಸುಗೋಳ, ಎಸ್. ಎನ್.ಬಾಗಲಕೋಟ, ಗೀತಾ ಹತ್ತಿ, ಡಿ. ಡಿ. ಅಂಕಲಗಿ, ಬಿ.ಎಸ್. ಮಠ, ಎ.ಬಿ. ದಢಕೆ, ಕಬೂಲ್ ಕೊಕಟನೂರ, ಎಸ್. ಎನ್. ಗಗನಮಾಲಿ, ಅಶೋಕ ಬೂದಿಹಾಳ, ವೀರಭದ್ರಪ್ಪ, ಅಜೀಜ ಅರಳಿಮಟ್ಟಿ, ಸಲೀಮ ದಡೇದ, ಎಂ.ಎ.ಮುಲ್ಲಾ, ಎಂ.ಎಸ್. ಮುಕರ್ತಿಹಾಳ, ವೈ.ಟಿ. ಪಾಟೀಲ, ಎಂ.ಎಂ. ವಾಲಿಕಾರ, ಎಸ್.ವಿ.ಹರಳಯ್ಯ, ಪರಮಾನಂದ ಚಾಂದಕವಟೆ, ಆನಂದ ಕೆಂಭಾವಿ, ಜೈರಾಮ ಚವ್ಹಾಣ, ಎ.ಎಚ್. ವಾಲಿಕಾರ, ಎಂ.ಎನ್.ನಾಯಿಕ,ವಿಜಕುಮಾರ ದೇಸಾಯಿ, ಸಿದ್ರಾಯ ಅಥಣಿ, ಅನೀಲ ಗೊಡೆಪ್ಪಗೋಳ, ವಿಜಯಲಕ್ಷ್ಮಿ ದಿವಾನಜಿ ಸೇರಿದಂತೆ ಕ.ರಾ.ಪ್ರಾ.ಶಾ. ಶಿಕ್ಷಕರ ಸಂಘದ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಪದಾಧಿಕಾರಿಗಳು, ಶಿಕ್ಷಕರು ಪಾಲ್ಗೊಂಡಿದ್ದರು.

# ಸಾವಯವ ಗೊಬ್ಬರ ಮಾರಾಟ

**ಬಾಗಲಕೋಟೆ :** ಬಾಗಲಕೋಟೆ ನಗರಸಭೆಯ ಘನತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಪ್ರತಿದಿನ ಸಂಗ್ರಹವಾಗುವ ಹಸಿಕಸವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಸಾವಯವ ಗೊಬ್ಬರ ತಯಾ-ರಿಸಲಾಗುತ್ತಿದೆ. ಈ ಗೊಬ್ಬರವು ಕೃಷಿಗೆ ಅನುಕೂಲವಾಗಿದ್ದು, ಹೋಲಗಳಿಗೆ ಬಳಕೆಗೆ ಯೋಗ್ಯವಾಗಿದೆ. ಸದರಿ ಸಾವಯವ ಗೊಬ್ಬರವನ್ನು ನಿಗದಿತ ದರದಲ್ಲಿ ನಗರಸಭೆ ಕಾರ್ಯಾಲಯದಿಂದ ಪೂರೈಸಲಾಗುತ್ತಿದ್ದು, ಅಗತ್ಯವಿರುವ ರೈತರು ಹಾಗೂ ಸಾರ್ವಜನಿಕರು ಬಾಗಲಕೋಟೆ ನಗರಸಭೆ ಕಾರ್ಯಾಲಯವನ್ನು ಸಂಪರ್ಕಿಸಬಹುದು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜವಾಹರ ನವೋದಯ: ಖಾಲಿ ಸೀಟು ಭರ್ತಿಗೆ ಅವಧಿ ವಿಸ್ತರಣೆ

**ಬಾಗಲಕೋಟೆ :** ಬಾದಾಮಿ ತಾಲೂಕಿನ ಚಿರ್ಲಕೊಪ್ಪ ಜವಾಹರ ನವೋದಯ ವಿದ್ಯಾಲಯದಲ್ಲಿ ಪಸಕ್ತ ಸಾಲಿನ 11ನೇ ತರಗತಿಗೆ ಖಾಲಿ ಇರುವ ಸೀಟುಗಳಿಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಆಗಸ್ಟ 20 ವರೆಗೆ ವಿಸ್ತರಿಸಲಾಗಿದೆ. ಆಸಕ್ತರು ವೆಬ್‌ಸೈಟ್ http://cbseitms.nic.in/2025/nvsxi ಮೂಲಕ ಅಥವಾ ಆಫ್‌ನೈಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮನೆಯನ್ನು ಸ್ವರ್ಗ ಮಾಡುವ ಶಕ್ತಿ ಮಹಿಳೆಗಿದೆ: ಆನಂದ ದೇವರು

**ಜಮಖಂಡಿ :** ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ. ಹೆಣ್ಣು ಜಗದ ಕಣ್ಣು. ಹೆಣ್ಣು ಸಾಕ್ಷಾತ್ ದೇವತೆ ಸ್ವರೂಪ. ಹೆಣ್ಣು ನಕ್ಕರೆ ಮನೆ ಸ್ವರ್ಗ. ಮನೆಗಳನ್ನು ಸ್ವರ್ಗ ಮಾಡುವ ಶಕ್ತಿಯನ್ನು ಭಗವಂತ ಮಹಿಳೆಯರಿಗೆ ಕೊಟ್ಟಿದ್ದಾನೆ ಎಂದು ಓಲೆಮಠದ ಆನಂದ ದೇವರು ಶ್ರೀಗಳು ಹೇಳಿದರು.

ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಜರುಗುತ್ತಿರುವ ಓಣಿಗೊಂದು ದಿನ ವಚನ ಶ್ರಾವಣ ಅಂಗವಾಗಿ ಮಾಳಿ ಸಮಾಜ ಭವನದಲ್ಲಿ ಗುರುವಾರ ಸಂಜೆ ನಡೆದ ಇಪ್ಪತ್ತೊಂದನೆ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಭಗವಂತ ಒಲಿಯಬೇಕಾದರೆ ಎಲ್ಲ ಮಹಿಳೆಯರು ಒಡೆದ ಮನಸ್ಸುಗಳನ್ನು ಜೋಡಿಸುವಂಥ ಸೂಜಿಯ ತರಹ ಕೆಲಸ ಮಾಡಬೇಕೆ ವಿನಹ: ಕತ್ತರಿಯ ತರಹದ ಕೆಲಸ ಮಾಡಬಾರದು. ಎಲ್ಲರನ್ನೂ ಒಂದು ಗೂಡಿಸುವ ಕೆಲಸ ಮಾಡುವವರನ್ನು ಸಮಾಜ ತಲೆಯ ಮೇಲೆ ಹೊತ್ತು ಗೌರವಿಸುತ್ತದೆ ಎಂದರು.

ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ



ಮಹಾಸ್ವಾಮಿಗಳು ಸಾನಿಧ್ಯವಹಿಸಿ ಮಾತನಾಡಿ, ಭಾರತ ದೇಶವನ್ನು ಭಾರತಮಾತೆ, ಕರ್ನಾಟಕ ರಾಜ್ಯವನ್ನು ಕರ್ನಾಟಕ ಮಾತೆ, ಕನ್ನಡ ಭಾಷೆಯನ್ನು ಮಾತೃಭಾಷೆ ಮತ್ತು ಮಾತೃ ದೇವೋಭವ ಎಂದು ಹೇಳುವುದರಲ್ಲಿ ಮಹಿಳೆಯರಿಗೆ ಸಮಾಜ ನೀಡಿದ ಗೌರವದ ಪ್ರತೀಕವಾಗಿವೆ. ಸಂಸ್ಕೃತಿ ಉಳಿದಿದ್ದೆ ಮಹಿಳೆಯರಿಂದ ಎಂದು ಆಶೀರ್ವಚನ ನೀಡಿದರು.

ಸರ್ಕಾರಿ ಪಿ.ಬಿ. ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಚಂದ್ರಕಲಾ ಜನಗೌಡ 'ಹೆಣ್ಣು ಪ್ರತ್ಯಕ್ಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುತ್ತ ಮಾತನಾಡಿ, ಹೆಣ್ಣು ದೈವಸ್ವರೂಪ ಎಂದರು.

ರತ್ನಾ ಶೇಠ ಮಾತನಾಡಿದರು. ನಗರಸಭೆ ಸದಸ್ಯ ಗುರುಪಾದ ಮೆಂಡಿಗೇರಿ, ಹಿರಿಯರಾದ ಶಿವಪ್ಪ ತಾನಪ್ಪಗೋಳ ಉಪಸ್ಥಿತರಿದ್ದರು. ಸರಸ್ವತಿ ಸಬರದ (ಹೆಗಡಿ), ಗೋಪಾಲ ತುಳಜಾಪೂರ ಸಂಗೀತ ಸೇವೆ ಸಲ್ಲಿಸಿದರು.

ದಾನೇಶ್ವರಿ ಮಾಳಿ ಸ್ವಾಗತಿಸಿದರು. ಪೂರ್ಣಿಮಾ ಮಾಳಿ ನಿರೂಪಿಸಿದರು. ಜ್ಯೋತಿ ಮಾಳಿ ವಂದಿಸಿದರು.

# ಅಂಗದಾನ ಶ್ರೇಷ್ಠವಾದದ್ದು

**ಜಮಖಂಡಿ :** ಸುವರ್ಣ ದಾನ, ಗೋ ದಾನ, ಭೂ ದಾನ, ಕನ್ಯಾ ದಾನಗಳಿಗಿಂತ ವೈಜ್ಞಾನಿಕ ಯುಗದಲ್ಲಿ ಅಂಗ ದಾನ ಅತ್ಯಂತ ಶ್ರೇಷ್ಠವಾಗಿದೆ ಎಂದು ಎಜಿಎಂ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ. ಮುರಲೀಧರ ಬಡಿಗೇರ ಹೇಳಿದರು. ವಿಶ್ವ ಅಂಗದಾನ ದಿನಾಚರಣೆಯ ಅಂಗವಾಗಿ ನಡೆದ ಅಂಗದಾನದ ಮಹತ್ವ ತಿಳಿಸುವ ಜಾಥಾ ಹಾಗೂ ಬೀದಿ ನಾಟಕದ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮವನ್ನು ಉದ್ದೇಶಿಸಿ ಗುರುವಾರ ಮಾತನಾಡಿದರು. ವಿಜ್ಞಾನ ಯುಗದಲ್ಲಿ ಅನೇಕ ಸಾಧನೆಗಳನ್ನು ಮಾಡಲಾಗಿದೆ. ದೇಹದ ಬಹುಮುಖ್ಯ ಅಂಗಗಳನ್ನು ಬದಲಾಯಿಸಿ ಕಸಿ ಮಾಡಲಾಗುತ್ತಿದೆ. ಹೃದಯ, ಕಿಡ್ನಿ, ಲಿವರ್, ಕಣ್ಣುಗಳು, ಕರಳು ಸೇರಿದಂತೆ ವಿವಿಧ ಅಂಗಗಳನ್ನು ಅವಶ್ಯವಿರುವವರಿಗೆ ದಾನದ ರೂಪದಲ್ಲಿ ನೀಡುವ ಕ್ರಮವು ಚಾಲ್ತಿಯಲ್ಲಿದ್ದು ಅನೇಕಬಲ್ಲಿದರುದೇಹದಾನ,ನೇತ್ರದಾನಗಳನ್ನು ಮಾಡಿ ಮಾದರಿಯಾಗಿದ್ದಾರೆ. ಈ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶ್ವ




ಅಂಗದಾನ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಹೇಳಿದರು. ದೃಷ್ಠಿ ಹೀನ ವ್ಯಕ್ತಿಗೆ ನೇತ್ರದಾನದ ಮೂಲಕ ಪುನ: ವಿಶ್ವವನ್ನು ನೋಡಲು ಅವಕಾಶ ಒದಗಿಸಿ ಕೊಡುವುದು ಪುಣ್ಯದ ಕೆಲಸವಾದ್ದರಿಂದ ಪ್ರತಿಯೊಬ್ಬರು ಅಂಗಾಂಗಗಳ ದಾನ ಹಾಗೂ ಅದ-ರಿಂದಾಗುವ ಪರೋಪಕಾರದ ಬಗ್ಗೆ ತಿಳಿದು ಕೊಳ್ಳಬೇಕು. ಅವಶ್ಯವಿರುವ ವ್ಯಕ್ತಿಗಳಿಗೆ ದಾನ ಮಾಡುವ ಮೂಲಕ ಪರೋಪಕಾರ ಮಾಡಲು ಮುಂದಾಗಬೇಕು ಎಂದು ಹೇಳಿದರು.

ಕಾಲೇಜಿನ ವಿದ್ಯಾರ್ಥಿಗಳಾದ ಸಚಿನ, ಋಷಿಕೇಶ, ಸೂರಜ, ವಿಶ್ವಜಿತ, ಪ್ರಸನ್ನ, ಬಸವರಾಜ, ರಮೇಶ, ಅಜೀದ್, ಕೀರ್ತಿ, ಆಶಾ, ಸಹನಾ, ಶ್ರಾವಣಿ ಮುಂತಾದವರು ಬೀದಿ ನಾಟಕದ ಮೂಲಕ ಅಂಗಾಂಗ ದಾನದ ಮಹತ್ವ ತಿಳಿಸಿಕೊಟ್ಟರು. ಡಾ.ಸಂಗೀತಾ ಚೌಕಿಮಠ, ಡಾ. ಮಾಂತೇಶ ನಿಂಬಾಳ, ಡಾ. ಶಿವಪ್ರಸಾದ, ಡಾ. ಸುನೀಲ ಸಬ್ಸಣ್ಣವರ, ಡಾ. ಅಕ್ಷಯ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜಿಲ್ಲಾ ಯುವ ಕಾಂಗ್ರೆಸ್‌ನಿಂದ ಮತಕಳ್ಳತನದ ವಿರುದ್ಧ ಪೋಸ್ಟರ್ ಅಭಿಯಾನ

**ಕಲಬುರಗಿ :** ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಶಕೀಲ್ ಸರಡಗಿ ನೇತೃತ್ವದಲ್ಲಿ ನಗರದ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿರುವ ಮತ ಕಳ್ಳತನದ ವಿರುದ್ಧ ಪೊ?ಸ್ಟರ್ ಅಭಿಯಾನವನ್ನು ಪ್ರಾರಂಭಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಯುವ ಕಾಂಗ್ರೆಸ್ ನಾಯಕರು, ಕೇಂದ್ರ ಚುನಾವಣಾ ಆಯೋಗವನ್ನು ತೀವ್ರವಾಗಿ ಟೀಕಿಸಿದರು, ಅದು ಬಿಜೆಪಿಯ ಕೈಗೊಂಬೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಹಿರಿಯ ನಾಯಕ ರಾಹುಲ್ ಗಾಂಧಿ ಅವರು ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸುವ ಬದಲು, ಆಯೋಗವು ವಿರೋಧ ಪಕ್ಷಗಳ ಭಯವನ್ನು ತೋರಿಸುತ್ತಾ ಮೌನವನ್ನು ಆರಿಸಿಕೊಂಡಿದೆ ಎಂದು ಅವರು ಹೇಳಿದರು.

ನಮ್ಮ ಆಂದೋಲನ ಸ್ಪಷ್ಟವಾಗಿದೆ.ಒಬ್ಬ ವ್ಯಕ್ತಿ, ಒಂದು ಮತವನ್ನು ಅದರ ನಿಜವಾದ ಉತ್ಸಾಹದಲ್ಲಿ ಜಾರಿಗೆ ತರಲಾಗಿದೆ ಎಂದು ನಾವು ಖಚಿತಪಡಿಸಿಕೊಳ್ಳುತ್ತೇವೆ ಮತ್ತು ಪ್ರತಿಯೊಬ್ಬ ನಾಗರಿಕನು ಕುಶಲತೆ ಅಥವಾ




ವಂಚನೆಯಿಲ್ಲದೆ ಮತ ಚಲಾಯಿಸಲು ತಮ್ಮ ಹಕ್ಕಿನ ಅವಕಾಶವನ್ನು ಪಡೆಯುತ್ತಾನೆ ಎಂದು ಶಕೀಲ್ ಸರಡಗಿ ಹೇಳಿದರು.ಈರಣ್ಣ ಪಾಟೀಲ ಝುಳಕಿ.ಅಮರ ಶಿರವಾಳ,ಪರಶುರಾಮ ನಾಟೀಕಾರ,ಉಮರ್ ಜುನ್ಯೆದಿ,ರಾಜು ಮಾಳಗಿ,ಇಜಾಜ್ ನಿಂಬಾಳಕರ್,ಗಣೇಶ ನಾಗನಹಳ್ಳಿ,ಸಂಘಪಾಲ್ ಕಾಂಬಳೆ,ಮಿಸ್ತ್ರೀ ಶರ್ಫುದ್ದೀನ್,ಅಸ್ಲಂ ಸಿಂದಗಿ,ಕಾರ್ತಿಕ ಹೊಸಮನಿ ಸೇರಿದಂತೆ ಹಲವರು ಪಾಲ್ಗೊಂಡರು.

# ಎಸ್‌ಆರೆನ್ ಮೆಹತಾ ಶಾಲೆಯಲ್ಲಿ ಎಡಗೈ ಬಳಕೆದಾರರ ದಿನಾಚರಣೆ




**ಕಲಬುರಗಿ :** ನಗರದ ಎಸ್. ಆರ್. ಎನ್ ಮೆಹತಾ ಸಿಬಿಎಸ್‌ಸಿ ಶಾಲೆಯಲ್ಲಿ ಎಡಗೈ ವಿದ್ಯಾರ್ಥಿಗಳ ದಿನವನ್ನು ಆಚರಿಸಲಾಯಿತು.

ಎಡಗೈ ವಿದ್ಯಾರ್ಥಿಗಳ ವಿಶಿಷ್ಟ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಗುರುತಿಸಿ ಎಡಗೈ ಬಳಕೆದಾರರ ದಿನ ಆಚರಣೆಯನ್ನು ಮಾಡಲಾಯಿತು. ಭಾರತದಲ್ಲಿ ಕೆಲವು ಶಾಲೆಗಳು ಮಾತ್ರ ಅಂತರಾಷ್ಟ್ರೀಯ ಎಡಗೈ ಬಳಕೆದಾರರ ದಿನವನ್ನು ಆಚರಿಸುತ್ತವೆ. ಕಲಬುರಗಿಯಲ್ಲಿ ಈ ಕಾರ್ಯಕ್ರಮವನ್ನು ಆಚರಿಸಿದ ಏಕೈಕ ಶಾಲೆ ಎಸ್. ಆರ್. ಎನ್ ಮೆಹತಾ ಆಗಿದೆ. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ. ಅರುಂಧತಿ ಪಾಟೀಲ್ ಅವರು ಆಗಮಿಸಿ ಎಡಗೈ ಬಳಕೆದಾರರಾಗುವುದರ ಸವಾಲುಗಳು ಮತ್ತು ಪ್ರಯೋಜನಗಳ ಬಗ್ಗೆ ಪೋಷಕರಿಗೆ ಅರಿವು ಮೂಡಿಸಿದರು.

ಈ ವಿಶೇಷ ದಿನದ ಮಹತ್ವವನ್ನು ಕುರಿತು ಮಾತನಾಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕ ನುಡಿಗಳನ್ನು ಆಡಿದರು. ಈ ವಿಶೇಷ ಸಂದರ್ಭದಲ್ಲಿ ಎಡಗೈ ಪೋಷಕರಿಗಾಗಿ ವಿಶೇಷ ಚಟುವಟಿಕೆಗಳು ಮತ್ತು ಆಟಗಳನ್ನು ಆಡಿಸಲಾಯಿತು. ನಮ್ಮ ಶಾಲೆಯಲ್ಲಿ ಒಟ್ಟು 79 ಎಡಗೈ ಪೋಷಕರು ಮತ್ತು 82 ಎಡಗೈ ವಿದ್ಯಾರ್ಥಿಗಳಿದ್ದಾರೆ. ವಿದ್ಯಾರ್ಥಿಗಳಲ್ಲಿರುವ ವಿಶಿಷ್ಟತೆಯನ್ನು ಗುರುತಿಸಿ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618